# ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನಿಯೋಜನೆಗಳ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013

## (2013ರ ಅಧಿನಿಯಮ ಸಂಖ್ಯೆ 25)

(18ನೇ ಸೆಪ್ಟೆಂಬರ್, 2013)

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರಂತೆ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಮತ್ತು ಅವರ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ನಾಗರೀಕರಲ್ಲಿ ವ್ಯಕ್ತಿ ಗೌರವವನ್ನು ಸುನಿಶ್ಚಿತಪಡಿಸಿ, ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸುವುದು ಹಾಗೂ ಅದನ್ನು ನೆಲೆಗೊಳಿಸಬೇಕೆಂದು ಸಂವಿಧಾನದ ಪ್ರಸ್ತಾವನೆಯಲ್ಲಿ ತಿಳಿಸಿದ್ದು, ಅದು ಸಂವಿಧಾನ ಗುರಿಗಳಲ್ಲಿ ಒಂದಾಗಿರುವುದರಿಂದ:

ಮತ್ತು ಅವನು ಗೌರವಯುತವಾಗಿ ಬದುಕುವ ಹಕ್ಕನ್ನು ಸಂವಿಧಾನದ 3ನೇ ಭಾಗದಲ್ಲಿ ಇರುವ ಮೂಲಭೂತ ಹಕ್ಕುಗಳಲ್ಲಿ ಖಾತ್ರಿಪಡಿಸಿರುವುದರಿಂದ:

ಮತ್ತು ಸಂವಿಧಾನದ 46ನೇ ಅನುಚ್ಛೇದದಲ್ಲಿ, ಇತರ ವಿಷಯಗಳ ಜೊತೆಗೆ, ರಾಜ್ಯವು ತನ್ನಲ್ಲಿರುವ ದುರ್ಬಲ ವರ್ಗಗಳಿಗೆ ಮತ್ತು ಅದರಲ್ಲೂ ವಿಶೇಷವಾಗಿ ಸಾಮಾಜಿಕವಾಗಿ ಅನ್ಯಾಯಕ್ಕೆ ಹಾಗೂ ಎಲ್ಲಾ ರೀತಿಯ ಶೋಷಣೆಗಳಿಗೆ ಒಳಗಾದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ರಕ್ಷಣೆ ಒದಗಿಸಬೇಕೆಂದು ತಿಳಿಸಿರುವುದರಿಂದ;

ಮತ್ತು ದೇಶದ ಅನೇಕ ಭಾಗಗಳಲ್ಲಿ ಮಲಹೊರುವ ಅಮಾನವೀಯ ಪದ್ಧತಿಯು ಇನ್ನೂ ಜೀವಂತವಾಗಿರುವುದರಿಂದ, ನೈರ್ಮಲ್ಯರಹಿತ ಶೌಚಾಲಯಗಳು ಇನ್ನೂ ಹಾಗೆಯೇ ಅಸ್ತಿತ್ವದಲ್ಲಿರುವುದರಿಂದ ಮತ್ತು ಅತ್ಯಂತ ನೀಚ ರೀತಿಯ ಜಾತಿಪದ್ಧತಿ ಇರುವುದರಿಂದ ಮತ್ತು ನೈರ್ಮಲ್ಯರಹಿತ ಶೌಚಾಲಯ ಹಾಗೂ ಮಲ ಹೊರುವ ಜಾಡಮಾಲಿಗಳೆಂಬ ಎರಡು ಅನಿಷ್ಠ ಪದ್ಧತಿಗಳನ್ನು ಸಮಾಜದಿಂದ ಇನ್ನಿಲ್ಲದಂತೆ ನಿರ್ಮೂಲನೆ ಮಾಡಲು ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನುಗಳು ಸಾಕಷ್ಟು ಸಮರ್ಥವಾಗಿಲ್ಲದಿರುವುದರಿಂದ;

ಮತ್ತು ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಕೆಲಸಗಳಿಂದ ಅವರಿಗೆ ಆಗಿರುವ ಗತಕಾಲದ ಅನ್ಯಾಯವನ್ನು ಮತ್ತು ಅಗೌರವದ ಬದುಕನ್ನು ಸರಿಪಡಿಸುವುದಕ್ಕೆ ಮತ್ತು ಅವರು ಗೌರವಯುತ ಬದುಕನ್ನು ನಡೆಸುವುದಕ್ಕೆ ಅವರಿಗೆ ಪುನರ್ವಸತಿ ಕಲ್ಪಿಸುವುದು ಅತ್ಯವಶ್ಯಕವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು;–

## ಅಧ್ಯಾಯ–1

## ಪ್ರಾರಂಭಿಕ

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:

**1.** (1) ಈ ಅಧಿನಿಯಮವನ್ನು ಮಲಹೊರುವ ಜಾಡಮಾಲಿಗಳ ನಿಯೋಜನೆ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪರಂತು, ಹಾಗೆ ಅಧಿಸೂಚಿಸಲಾದ ದಿನಾಂಕವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕದ ನಂತರ ಅರವತ್ತು ದಿನಗಳಿಗಿಂತ ಮುಂಚಿತವಾಗಿ ಇರತಕ್ಕದ್ದಲ್ಲ.

ಪರಿಭಾಷೆಗಳು:

**2.** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯತಾ ಅಗತ್ಯಪಡಿಸಿದ ಹೊರತು ;–

(ಎ) **'ಏಜೆನ್ಸಿ'** ಎಂದರೆ ಒಂದು ಸ್ಥಳೀಯ ಪ್ರಾಧಿಕಾರವನ್ನು ಹೊರತುಪಡಿಸಿ, ಒಂದು ಪ್ರದೇಶದಲ್ಲಿ ನೈರ್ಮಲ್ಯ ಸೌಕರ್ಯಗಳನ್ನು ಒದಗಿಸುತ್ತಿರುವ ಯಾವುದೇ ಏಜೆನ್ಸಿ ಮತ್ತು ಇದರಲ್ಲಿ ರಿಯಲ್ ಎಸ್ಟೇಟ್‌ನ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ತೊಡಗಿರುವ ಒಬ್ಬ ಗುತ್ತಿಗೆದಾರ ಅಥವಾ ಒಂದು ಫಾರ್ಮ್ ಅಥವಾ ಒಂದು ಕಂಪನಿಯೂ ಒಳಗೊಳ್ಳುತ್ತದೆ;

(ಬಿ) ದಂಡು ಪ್ರದೇಶದ ಮಂಡಳಿಗಳಿಗೆ, ರೈಲ್ವೆ ಭೂಮಿಗಳಿಗೆ ಮತ್ತು ಕೇಂದ್ರ ಸರ್ಕಾರದ ಒಡೆತನವಿರುವ ಭೂಮಿಗಳು ಮತ್ತು ಕಟ್ಟಡಗಳಿಗೆ ಒಂದು ಕೇಂದ್ರ ಸಾರ್ವಜನಿಕ ವಲಯ ಉದ್ಯಮಕ್ಕೆ ಅಥವಾ ಕೇಂದ್ರ ಸರ್ಕಾರವು ನೀಡುವ ಸಂಪೂರ್ಣ ಅಥವಾ ಗಣನೀಯ ಹಣದಿಂದ ನಡೆಯಲ್ಪಡುತ್ತಿರುವ ಒಂದು ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ 'ಸಮುಚಿತ ಸರ್ಕಾರ' ಎಂದರೆ ಕೇಂದ್ರ ಸರ್ಕಾರ ಮತ್ತು ಇತರ ಎಲ್ಲ ಪ್ರಕರಣಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ ;

(ಸಿ) ಪುರಸಭೆ ಅಥವಾ ಪಂಚಾಯಿತಿಗೆ ಸಂಬಂಧಿಸಿದಂತೆ 'ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ' ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಅವುಗಳ ಅತ್ಯಂತ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ;

(ಡಿ) **'ಅಪಾಯಕಾರಿ ಸ್ವಚ್ಛತೆಯಲ್ಲಿ ತೊಡಗುವುದು'** ಎಂದರೆ ಒಳಚರಂಡಿ ಅಥವಾ ರೊಚ್ಚುತೊಟ್ಟಿಯ ಸಂಬಂಧದಲ್ಲಿ ಒಬ್ಬ ನೌಕರನಿಗೆ ಆತನ ನಿಯೋಜಕನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಅಡಿಯಲ್ಲಿ ಗೊತ್ತುಪಡಿಸಬಹುದಾದ ಅಥವಾ ಉಪಬಂಧಿಸಬಹುದಾದ ರೀತಿಯಲ್ಲಿ ಸಂರಕ್ಷಣಾ ಸಾಧನೆ ಹಾಗೂ ಇತರ ಸ್ವಚ್ಛತಾ ಸಾಧನಗಳನ್ನು ಒದಗಿಸಿ ಮತ್ತು ಸುರಕ್ಷಾ ಮುನ್ನೆಚ್ಚರಿಕೆ ಕ್ರಮಗಳನ್ನು ಖಚಿತಪಡಿಸಿ ಕೊಂಡು ನೌಕರನ ಹಕ್ಕುಬಾಧ್ಯತೆಗಳನ್ನು ಈಡೇರಿಸದೆ ಅವನಿಂದ ದೈಹಿಕವಾಗಿ ಸ್ವಚ್ಛಗೊಳಿಸುವಂತಹ ಕೆಲಸ ಮಾಡಿಸುವುದು ಎಂದರ್ಥ;

(ಇ) **'ನೈರ್ಮಲ್ಯರಹಿತ ಶೌಚಾಲಯ'** ಎಂದರೆ, ಮಾನವನ ಮಲಮೂತ್ರಗಳನ್ನು ಸ್ವಚ್ಛ ಮಾಡಬೇಕಾಗಿರುವ ಅಥವಾ ಅನ್ಯತಾ ರೀತಿಯಲ್ಲಿ ದೈಹಿಕವಾಗಿ ಸ್ವಚ್ಛತೆಯನ್ನು ಅದರ ಮೂಲ ಸ್ಥಾನದಿಂದ ನಿರ್ವಹಿಸಬೇಕಾಗಿರುವ ಶೌಚಾಲಯ ಅಥವಾ ನಿಯಮಿಸ ಬಹುದಾದ ಅಂಥ ರೀತಿಯಲ್ಲಿ ಮಲಮೂತ್ರವು ಸಂಪೂರ್ಣವಾಗಿ ಕೊಳೆತು ಹೋಗುವ ಮುಂಚೆ ಅದನ್ನು ಹೊರಹಾಕುವುದಕ್ಕೆ ಅಥವಾ ನೀರಿನಿಂದ ತಳ್ಳುವುದಕ್ಕೆ ಮಾಡಿದ ತೆರೆದ ಚರಂಡಿ ಅಥವಾ ಒಂದು ಗುಂಡಿ :

ಪರಂತು, ಪ್ರಯಾಣಿಕರ ರೈಲು ಗಾಡಿಯಲ್ಲಿ ನೀರು ಹರಿಸಿ (ಫ್ಲೆಷ್ ಮಾಡಿ) ಸ್ವಚ್ಛಗೊಳಿಸುವ ಶೌಚಾಲಯಗಳು ಇದ್ದು, ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂತ ಸುರಕ್ಷಾ ಸಾಧನ ಸಲಕರಣೆಗಳ ಸಹಾಯದೊಂದಿಗೆ ನೌಕರರು ಅವುಗಳನ್ನು ಸ್ವಚ್ಛಗೊಳಿಸಿದಾಗ ಇವುಗಳನ್ನು ನೈರ್ಮಲ್ಯರಹಿತ ಶೌಚಾಲಯಗಳೆಂದು ಭಾವಿಸತಕ್ಕದ್ದಲ್ಲ.

(ಎಫ್) **'ಸ್ಥಳೀಯ ಪ್ರಾಧಿಕಾರ'** ಎಂದರೆ :–

(i) ಸಂವಿಧಾನ 243–ಪಿ ಅನುಚ್ಛೇದದ (ಇ) ಖಂಡ ಮತ್ತು (ಎಫ್) ಖಂಡದಲ್ಲಿ ಪರಿಭಾಷಿಸಲಾದಂತೆ ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ನೈರ್ಮಲ್ಯಕ್ಕಾಗಿ ಹೊಣೆಯಾಗಿರುವ ಆ ಯಾವುದೇ ಒಂದು ಪುರಸಭೆ ಅಥವಾ ಒಂದು ಪಂಚಾಯಿತಿ :

(ii) ದಂಡು ಪ್ರದೇಶಗಳ ಅಧಿನಿಯಮ, 2006ರ 10ನೇ ಪ್ರಕರಣದ ಮೇರೆಗೆ ರಚಿತವಾದ ಒಂದು ದಂಡು ಪ್ರದೇಶದ ಮಂಡಳಿ ಮತ್ತು 2006 ರ 41

(iii) ಒಂದು ರೈಲ್ವೆ ಪ್ರಾಧಿಕಾರ;

(ಜಿ) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಎಂದರೆ ಈ ಅಧಿನಿಯಮವು ಪ್ರಾರಂಭವಾಗುವ ಸಂದರ್ಭದಲ್ಲಿ ಅಥವಾ ನಂತರದ ಯಾವುದೇ ಸಮಯದಲ್ಲಿ ನೈರ್ಮಲ್ಯರಹಿತ ಶೌಚಾಲಯ ಅಥವಾ ತೆರೆದ ಚರಂಡಿ ಅಥವಾ ಯಾವುದೇ ಒಂದು ಗುಂಡಿಯಲ್ಲಿ ಇರುವ ಮಾನವನ ಮಲಮೂತ್ರವನ್ನು ದೈಹಿಕವಾಗಿ ಸ್ವಚ್ಛಗೊಳಿಸಲು, ಸಾಗಿಸಲು, ತೆಗೆದುಹಾಕಲು ಅಥವಾ ಅನ್ಯತಾ ಯಾವುದೇ ರೀತಿಯಲ್ಲಿ ನಿರ್ವಹಿಸುವುದಕ್ಕಾಗಿ ಒಬ್ಬ ವ್ಯಕ್ತಿ ಮೂಲಕ ಅಥವಾ ಒಂದು ಸ್ಥಳೀಯ ಪ್ರಾಧಿಕಾರದಿಂದ ಅಥವಾ ಒಂದು ಏಜೆನ್ಸಿ ಅಥವಾ ಒಬ್ಬ ಗುತ್ತಿಗೆದಾರನಿಂದ ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು

ಕೊಳೆಯುವ ಮುಂಚೆಯೇ ಅಂಥ ನೈರ್ಮಲ್ಯರಹಿತ ಶೌಚಾಲಯಗಳಿಂದ ಅಥವಾ ರೈಲ್ವೆ ಮಾರ್ಗ ಅಥವಾ ಇತರ ಅಂಥ ಸ್ಥಳಗಳಿಂದ ಅಥವಾ ಆವರಣಗಳಿಂದ ಮಾನವನ ಮಲ ಮೂತ್ರಗಳನ್ನು ತೆಗೆದು ಹಾಕುವ ಕಾರ್ಯದಲ್ಲಿ ತೊಡಗಿಕೊಂಡಿರುವ ಅಥವಾ ಆ ಉದ್ದೇಶಕ್ಕಾಗಿ ನಿಯೋಜಿತರಾಗಿರುವ ಒಬ್ಬ ವ್ಯಕ್ತಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸದಲ್ಲಿ ತೊಡಗಿರುವುದು ಎಂಬ ಪದವಳಿಯನ್ನು ಸಂದರ್ಭಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು.

**ವಿವರಣೆ: ಈ ಖಂಡದ ಉದ್ದೇಶಕ್ಕಾಗಿ–**

(ಎ) ತೊಡಗಿಕೊಂಡಿರುವ ಅಥವಾ ನಿಯೋಜಿತನಾಗಿರುವ ಎಂದರೆ, ಖಾಯಂ ಆಗಿ ಅಥವಾ ಗುತ್ತಿಗೆ ಆಧಾರದ ಮೇಲೆ ತೊಡಗಿಕೊಂಡಿರುವವನು ಅಥವಾ ನಿಯೋಜಿತನಾಗಿರುವವನು;

(ಬಿ) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಸಾಧನ ಸಲಕರಣೆಗಳ ಸಹಾಯದೊಂದಿಗೆ ಮತ್ತು ಅಂಥ ಸಂರಕ್ಷಣಾ ಪರಿಕರಗಳನ್ನು ಉಪಯೋಗಿಸುವ ಮೂಲಕ ಮಲಮೂತ್ರವನ್ನು ಸ್ವಚ್ಛಗೊಳಿಸುವುದಕ್ಕೆ ತೊಡಗಿಕೊಂಡಿರುವ ಅಥವಾ ನಿಯೋಜಿತನಾಗಿರುವ ಒಬ್ಬ ವ್ಯಕ್ತಿಯನ್ನು ಮ್ಯಾನ್ಯುಯಲ್‌ಸ್ಕ್ಯಾವೆಂಜರ್ ಎಂದು ಭಾವಿಸತಕ್ಕದ್ದಲ್ಲ.

**(ಹೆಚ್)** **ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ** ಎಂದರೆ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 1993ರ 3ನೇ ಪ್ರಕರಣದ ಮೇರೆಗೆ
64ರ 1993 ಸ್ಥಾಪಿತವಾದ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಇದು, ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಸಂಖ್ಯೆ: 17015/18/2003–ಎಸ್‌ಸಿಡಿ–IV ದಿನಾಂಕ 24ನೇ ಫೆಬ್ರವರಿ 2004ರಲ್ಲಿ ನಿರ್ಣಯಿಸಿದ ನಿರ್ಣಯದಂತೆ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಮುಂದುವರಿಯುತ್ತದೆ.

(ಐ) **'ಅಧಿಸೂಚನೆ'** ಎಂದರೆ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಮತ್ತು 'ಅಧಿಸೂಚಿಸು' ಎಂಬ ಪದಾವಳಿಯನ್ನು ಸಂದರ್ಭಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು.

(ಜೆ) **'ಅನುಭೋಗದಾರ'** ನೈರ್ಮಲ್ಯರಹಿತ ಶೌಚಾಲಯಗಳಿರುವ ಆವರಣಗಳಲ್ಲಿ ಬೇರೊಬ್ಬನನ್ನು ಮಲ ಹೊರುವ ಜಾಡಮಾಲಿಯಾಗಿ ನಿಯೋಜನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಅನುಭೋಗದಾರ ಎಂದರೆ ಅಂಥ ಆವರಣಗಳಲ್ಲಿ ತತ್ಕಾಲದಲ್ಲಿ ಆ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿ.

(ಕೆ) **'ಮಾಲೀಕ'** ನೈರ್ಮಲ್ಯರಹಿತ ಶೌಚಾಲಯಗಳಿರುವ ಆವರಣಗಳಲ್ಲಿ ಬೇರೊಬ್ಬನನ್ನು ಮಲ ಹೊರುವ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ನಿಯೋಜನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಮಾಲೀಕ ಎಂದರೆ ಅಂಥ ಆವರಣಗಳಿಗೆ ತತ್ಕಾಲದಲ್ಲಿ ಕಾನೂನು ಸ್ವಾಮ್ಯ ಹೊಂದಿರುವ ವ್ಯಕ್ತಿ.

(ಎಲ್) **'ನಿಯಮಿಸಲಾದುದು'** ಎಂದರೆ, ಈ ಅಧಿನಿಮಯದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) **'ರೈಲ್ವೆ ಪ್ರಾಧಿಕಾರ'** ಎಂದರೆ, ರೈಲ್ವೆ ಭೂಮಿಯ ಆಡಳಿತವನ್ನು ನಿರ್ವಹಿಸುವ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಒಂದು ಪ್ರಾಧಿಕಾರ';

(ಎನ್) **'ರೈಲ್ವೆ ಭೂಮಿ'** ಎಂಬುದು, ರೈಲ್ವೆಗಳ ಅಧಿನಿಯಮ, 1989ರ 2ನೇ ಪ್ರಕರಣದ
24ರ 1989 (32–ಎ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಿದ ಅರ್ಥವನ್ನೇ ಹೊಂದಿರತಕ್ಕದ್ದು;

(ಓ) **'ನೈರ್ಮಲ್ಯ ಶೌಚಾಲಯ'** ಎಂದರೆ ಯಾವ ಶೌಚಾಲಯವು ನೈರ್ಮಲ್ಯರಹಿತ ಶೌಚಾಲಯ ಆಗಿರುವುದಿಲ್ಲವೋ ಆ ಯಾವುದೇ ಶೌಚಾಲಯ ;

(ಪಿ) **'ರೊಚ್ಚು ತೊಟ್ಟಿ'** ಎಂದರೆ, ಮಾನವನ ಮಲಮೂತ್ರವನ್ನು ಹಿಡಿದಿಟ್ಟುಕೊಂಡು ಬ್ಯಾಕ್ಟೀರಿಯಾ ಕೀಟಾಣು ಕ್ರಿಯೆಗಳ ಮುಖಾಂತರ ಮಲಮೂತ್ರವು ಕೊಳೆಯುವುದಕ್ಕೆ ಅವಕಾಶ ಮಾಡಿಕೊಡುವ ಸಾಮಾನ್ಯವಾಗಿ ನೆಲದಡಿಯಲ್ಲಿ ನಿರ್ಮಿಸಿರುವ ಜಲ ನಿರೋಧಕ ತೊಟ್ಟಿ ಅಥವಾ ಛೇಂಬರ್;

(ಕ್ಯೂ) **'ಒಳಚರಂಡಿ'** ಎಂದರೆ, ಇತರೆ ತ್ಯಾಜ್ಯ ವಸ್ತುಗಳು ಮತ್ತು ಚರಂಡಿಯ ತ್ಯಾಜ್ಯಗಳ ಜೊತೆಗೆ ಮಾನವನ ಮಲಮೂತ್ರವನ್ನು ಸಾಗಿಸುವುದಕ್ಕಾಗಿ ನೆಲದಡಿಯಲ್ಲಿ ಹಾಕಲಾದ ಕೊಳವೆ ಮಾರ್ಗವ್ಯವಸ್ಥೆ ಅಥವಾ ಕೊಳವೆ ಮಾರ್ಗ;

(ಆರ್)**'ರಾಜ್ಯ ಸರ್ಕಾರ'**ಎಂದರೆ ಒಂದು ಒಕ್ಕೂಟದ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ;

(ಎಸ್) **'ಸಮೀಕ್ಷೆ'** ಎಂದರೆ ಅಧಿನಿಯಮದ 11 ಮತ್ತು 14ನೇ ಪ್ರಕರಣಗಳ ಅನುಸಾರವಾಗಿ ಕೈಗೊಂಡ ಮಲ ಹೊರುವ ಜಾಡಮಾಲಿಗಳ ಸಮೀಕ್ಷೆ.

41ರ 2006

(2)ಈ ಅಧಿನಿಯಮದಲ್ಲಿ ಬಳಸಿದ ಹಾಗೂ ಪರಿಭಾಷಿಸಿಲ್ಲದ, ಆದರೆ ದಂಡು ಪ್ರದೇಶಗಳ ಅಧಿನಿಯಮ, 2006ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಅಭಿವ್ಯಕ್ತಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದ ಅದೇ ಅರ್ಥಗಳನ್ನು ಹೊಂದಿರತಕ್ಕದ್ದು.

(3) ಈ ಅಧಿನಿಯಮದ VI ರಿಂದ VIII ರವರೆಗಿನ ಅಧ್ಯಾಯದ ಮೇರೆಗೆ ಪುರಸಭೆಗೆ ಸಂಬಂಧಿಸಿದ ವ್ಯಾಪ್ತಿಯು, ಸಂದರ್ಭಾನುಸಾರ, ಅನುಕ್ರಮವಾಗಿ ದಂಡು ಪ್ರದೇಶ ಮಂಡಳಿ ಮತ್ತು ರೈಲ್ವೆ ಭೂಮಿಯ ಅಧಿಕಾರ ವ್ಯಾಪ್ತಿಯೊಳಗೆ ಸೇರಿದ ಪ್ರದೇಶಗಳ ಸಂಬಂಧದಲ್ಲಿ ದಂಡು ಪ್ರದೇಶ ಮಂಡಳಿ ಅಥವಾ ರೈಲ್ವೆ ಪ್ರಾಧಿಕಾರದ ವ್ಯಾಪ್ತಿಯನ್ನು ಒಳಗೊಳ್ಳತಕ್ಕದ್ದು.

ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು

**3.** ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ನಿಯೋಜನೆ ಮತ್ತು ಶುಷ್ಕ ಶೌಚಾಲಯಗಳ ನಿರ್ಮಾಣ (ನಿಷೇಧ) ಅಧಿನಿಯಮ, 1993 ರಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಅಥವಾ ಇತರ ಯಾವುದೇ ಕಾನೂನು ಬಲದಿಂದ ಪರಿಣಾಮಕಾರಿಯಾದ ಯಾವುದೇ ಲಿಖಿತ ಪತ್ರದಲ್ಲಿ ಒಳಗೊಂಡಿರುವುದು ಅದರೊಂದಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು. 1993 ರ 46

## ಅಧ್ಯಾಯ – II

## ನೈರ್ಮಲ್ಯರಹಿತ ಶೌಚಾಲಯಗಳನ್ನು ಗುರುತಿಸುವುದು

ಸ್ಥಳೀಯ ಪ್ರಾಧಿಕಾರಗಳು ನೈರ್ಮಲ್ಯರಹಿತ ಶೌಚಾಲಯಗಳನ್ನು ಗುರುತಿಸುವುದಕ್ಕೆ ಮತ್ತು ಸಮುದಾಯ ನೈರ್ಮಲ್ಯ ರಹಿತ ಶೌಚಾಲಯಗಳನ್ನು

**4. (1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು :**

(ಎ) ಈ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ನಿಯಮಿಸಬಹುದಾದಂತಹ ರೀತಿಯಲ್ಲಿ, ಅದು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಅಸ್ತಿತ್ವದಲ್ಲಿರುವ ನೈರ್ಮಲ್ಯರಹಿತ ಶೌಚಾಲಯಗಳ ಸಮೀಕ್ಷೆಯನ್ನು ನಡೆಸತಕ್ಕದ್ದು ಮತ್ತು ಅಂಥ ನೈರ್ಮಲ್ಯರಹಿತ ಶೌಚಾಲಯಗಳ ಪಟ್ಟಿಯನ್ನು ಪ್ರಕಟಿಸತಕ್ಕದ್ದು ;

(ಬಿ) ಈ ಪ್ರಕರಣದ (ಎ) ಖಂಡದ ಮೇರೆಗೆ ಈ ಮೇಲ್ಕಂಡ ಪಟ್ಟಿ ಪ್ರಕಟಿತವಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಅವುಗಳ ಅನುಭೋಗದಾರನಿಗೆ ಒಂದು

ಒದಗಿಸುವುದಕ್ಕೆ ಸಮೀಕ್ಷೆ ಮಾಡುವುದು

ನೋಟೀಸ್‌ನ್ನು ನೀಡಿ, ಅದರಲ್ಲಿ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ನೈರ್ಮಲ್ಯರಹಿತ ಶೌಚಾಲಯಗಳನ್ನು ನೆಲಸಮ ಮಾಡುವುದಕ್ಕೆ ಅಥವಾ ಅವುಗಳನ್ನು ನೈರ್ಮಲ್ಯ ಶೌಚಾಲಯಗಳನ್ನಾಗಿ ಪರಿವರ್ತಿಸುವುದಕ್ಕೆ ತಿಳಿಸತಕ್ಕದ್ದು ;

ಪರಂತು ಸ್ಥಳೀಯ ಪ್ರಾಧಿಕಾರವು, ಸಾಕಷ್ಟು ಮುಕ್ತ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಸದರಿ ಅವಧಿಯನ್ನು ಮೂರು ತಿಂಗಳುಗಳು ಮೀರದಂತೆ ವಿಸ್ತರಿಸಬಹುದು;

(ಸಿ) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂಭತ್ತು ತಿಂಗಳುಗಳು ಮೀರದ ಅವಧಿಯೊಳಗೆ ಯಾವ ಪ್ರದೇಶಗಳಿಗೆ ನೈರ್ಮಲ್ಯರಹಿತ ಶೌಚಾಲಯಗಳು ಕಂಡು ಬಂದಿದೆಯೋ ಆ ಪ್ರದೇಶಗಳಲ್ಲಿ ಅತ್ಯಗತ್ಯವೆಂದು ಪರಿಗಣಿಸಬಹುದಾದಂತಹ ಸಂಖ್ಯೆಯ ನೈರ್ಮಲ್ಯ ಸಮುದಾಯ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಪುರಸಭೆಗಳು, ದಂಡು ಪ್ರದೇಶ ಮಂಡಳಿಗಳು ಮತ್ತು ರೈಲ್ವೆ ಪ್ರಾಧಿಕಾರಗಳು ಸಹ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮುಕ್ತವಾಗಿ ಮಲವಿಸರ್ಜನೆ ಮಾಡುವ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ನಿಟ್ಟಿನಲ್ಲಿ ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ, ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದಂಥ ಅವಧಿಯೊಳಗೆ ಸಾಕಷ್ಟು ಸಂಖ್ಯೆಯ ನೈರ್ಮಲ್ಯ ಸಮುದಾಯ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರಗಳು (1)ನೇ ಮತ್ತು (2)ನೇ ಉಪ ಪ್ರಕರಣಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಸಮುದಾಯ ನೈರ್ಮಲ್ಯ ಶೌಚಾಲಯಗಳ ನಿರ್ಮಾಣ ಮಾಡುವುದಕ್ಕೆ ಮತ್ತು ಎಲ್ಲಾ ಸಮಯದಲ್ಲಿ ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡುವುದಕ್ಕೆ ಸಹ ಅವು ಹೊಣೆಗಾರಿಕೆಯಿಂದ ಇರತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ, ರೈಲ್ವೆ ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ, ಸಮುದಾಯ ಎಂದರೆ, ರೈಲ್ವೆಯ ಪ್ರಯಾಣಿಕರು, ಅದರ ಸಿಬ್ಬಂದಿ ಮತ್ತು ಇತರ ಅಧಿಕೃತ ಬಳಕೆದಾರರು.

## ಅಧ್ಯಾಯ – III

## ನೈರ್ಮಲ್ಯರಹಿತ ಶೌಚಾಲಯಗಳ ಮತ್ತು ಮಲ ಹೊರುವ ಜಾಡಮಾಲಿಯ ನಿಯೋಜನೆ ಹಾಗೂ ಆ ವೃತ್ತಿಯಲ್ಲಿ ತೊಡಗುವುದರ ನಿಷೇಧ

ನೈರ್ಮಲ್ಯ ರಹಿತ ಶೌಚಾಲಯಗಳ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನಿಯೋಜನೆ ಹಾಗೂ ಆ ವೃತ್ತಿಯಲ್ಲಿ ತೊಡಗುವುದರ ನಿಷೇಧ.

**5.** (1) ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ನಿಯೋಜನೆ ಮತ್ತು ಶುಷ್ಕ ಶೌಚಾಲಯಗಳ ನಿರ್ಮಾಣ (ನಿಷೇಧ) ಅಧಿನಿಯಮ, 1993ರಲ್ಲಿ ಅಸಂಗತವಾದುದು ಏನೇ ಇದ್ದರೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ತರುವಾಯ ಯಾರೇ ವ್ಯಕ್ತಿ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಏಜೆನ್ಸಿಯು : 1993ರ 46

(ಎ) ನೈರ್ಮಲ್ಯರಹಿತ ಶೌಚಾಲಯಗಳನ್ನು ನಿರ್ಮಿಸತಕ್ಕದ್ದಲ್ಲ ; ಅಥವಾ

(ಬಿ) ಒಬ್ಬ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷ ವಾಗಿಯಾಗಲೀ ಮಲ ಹೊರುವುದಕ್ಕೆ ತೊಡಗಿಸತಕ್ಕದ್ದಲ್ಲ ಅಥವಾ ನಿಯೋಜಿಸತಕ್ಕದ್ದಲ್ಲ ಮತ್ತು ಹಾಗೆ ಮಲಹೊರುವ ವೃತ್ತಿಯಲ್ಲಿ ತೊಡಗಿರುವ ಅಥವಾ ನಿಯೋಜಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಮಲ ಹೊರುವ ವೃತ್ತಿ ಮಾಡುವುದು ತಪ್ಪೆಂದು ಸ್ಪಷ್ಟವಾಗುವ ಹಾಗೆ ತಿಳಿಸಿ ಅಥವಾ ಇಂಗಿತಪಡಿಸಿ ಆ ಕೂಡಲೇ ಅವನನ್ನು ಆ ಯಾವುದೇ ಬಾಧ್ಯತೆಯಿಂದ ವಿಮೋಚನೆ

ಗೊಳಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸ್ತಿತ್ವದಲ್ಲಿರುವ ಪ್ರತಿಯೊಂದು ನೈರ್ಮಲ್ಯರಹಿತ ಶೌಚಾಲಯಗಳನ್ನು 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮುಂಚೆ ಅನುಭೋಗದಾರನು ತನ್ನ ಸ್ವಂತ ಖರ್ಚಿನಲ್ಲಿ ನೆಲಸಮಗೊಳಿಸತಕ್ಕದ್ದು ಅಥವಾ ಅದನ್ನು ನೈರ್ಮಲ್ಯ ಶೌಚಾಲಯವನ್ನಾಗಿ ಮಾರ್ಪಾಡು ಮಾಡತಕ್ಕದ್ದು.

ಪರಂತು, ನೈರ್ಮಲ್ಯರಹಿತ ಶೌಚಾಲಯಕ್ಕೆ ಸಂಬಂಧಿಸಿದಂತೆ ಹಲವಾರು ಅನುಭೋಗದಾರರಿದ್ದಲ್ಲಿ ಅದನ್ನು ನೆಲಸಮಗೊಳಿಸುವುದಕ್ಕೆ ಅಥವಾ ಮಾರ್ಪಾಡು ಮಾಡುವುದಕ್ಕೆ –

(ಎ) ಅನುಭೋಗದಾರರ ಪೈಕಿ ಮಾಲೀಕನೂ ಒಬ್ಬ ಅನುಭೋಗದಾರನಾಗಿರುವುದು ಕಂಡು ಬಂದ ಸಂದರ್ಭದಲ್ಲಿ ಆವರಣಗಳ ಮಾಲೀಕ; ಮತ್ತು

(ಬಿ) ಇತರ ಎಲ್ಲಾ ಸಂದರ್ಭಗಳಲ್ಲಿ ಎಲ್ಲಾ ಅನುಭೋಗದಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಪ್ರವರ್ಗಗಳಿಗೆ ಮತ್ತು ಅಂಥ ಶ್ರೇಣಿಗಳಿಗೆ ಸೇರಿದ ಅನುಭೋಗದಾರರಿಗೆ ನೈರ್ಮಲ್ಯರಹಿತ ಶೌಚಾಲಯಗಳನ್ನಾಗಿ ಮಾರ್ಪಾಡು ಮಾಡುವುದಕ್ಕೆ ನೆರವನ್ನು ನೀಡಬಹುದು;

ಪರಂತು, ರಾಜ್ಯದ ನೆರವನ್ನು ಪಡೆಯದಿರುವುದಕ್ಕೆ ಒಂಭತ್ತು ತಿಂಗಳ ಅವಧಿ ಮೀರಿ ಹೋಗಿದ್ದು, ಇದು ನೈರ್ಮಲ್ಯರಹಿತ ಶೌಚಾಲಯಗಳನ್ನು ನಿರ್ವಹಿಸಲು ಅಥವಾ ಬಳಕೆ ಮಾಡುವುದಕ್ಕೆ ಬಲವಾದ ಕಾರಣವಾಗತಕ್ಕದ್ದಲ್ಲ ;

(3) ಯಾರೇ ಅನುಭೋಗದಾನು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೈರ್ಮಲ್ಯರಹಿತ ಶೌಚಾಲಯಗಳನ್ನು ನೆಲಸಮಗೊಳಿಸುವುದಕ್ಕೆ ಅಥವಾ ಅದನ್ನು ನೈರ್ಮಲ್ಯ ಶೌಚಾಲಯಗಳನ್ನಾಗಿ ಮಾರ್ಪಾಟುಗೊಳಿಸುವುದಕ್ಕೆ ವಿಫಲನಾಗಿ ದ್ದರೆ, ಅಂಥ ನೈರ್ಮಲ್ಯರಹಿತ ಶೌಚಾಲಯ ಇರುವ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರವು ಅದರ ಅನುಭೋಗದಾರನಿಗೆ ಇಪ್ಪತ್ತೊಂದು ದಿನಗಳು ಮೀರದ ಅವಧಿಯ ಒಂದು ನೋಟೀಸನ್ನು ನೀಡಿದ ತರುವಾಯ, ಅಂತಹ ನೈರ್ಮಲ್ಯರಹಿತ ಶೌಚಾಲಯಗಳನ್ನು ನೈರ್ಮಲ್ಯ ಶೌಚಾಲಯಗಳನ್ನಾಗಿ ಮಾರ್ಪಡಿಸತಕ್ಕದ್ದು ಅಥವಾ ಅದನ್ನು ನೆಲಸಮಗೊಳಿಸತಕ್ಕದ್ದು ಮತ್ತು ಅದು ಹಾಗೆ ಮಾರ್ಪಾಡುಗೊಳಿಸಿದ ಅಥವಾ ಸಂದರ್ಭಾನುಸಾರನೆಲಸಮಗೊಳಿಸಿದ ಅಂಥ ವೆಚ್ಚವನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಅಂತಹ ಅನುಭೋಗದಾರನಿಂದ ವಸೂಲಿ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

ಕರಾರು, ಒಪ್ಪಂದ ಮುಂತಾದವುಗಳು ಶೂನ್ಯವಾಗುವುದು

**6.** (1) ಈ ಅಧಿನಿಯಮವು ಪ್ರಾರಂಭವಾಗುವ ಮುಂಚೆ ಒಬ್ಬ ವ್ಯಕ್ತಿಯನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕೆಲಸ ಮಾಡುವ ಉದ್ದೇಶಕ್ಕಾಗಿ ತೊಡಗಿಸಲು ಅಥವಾ ನಿಯೋಜಿಸಲು ಯಾವುದೇ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಪತ್ರಗಳನ್ನು ಮಾಡಿಕೊಂಡಿದ್ದರೆ ಅಥವಾ ಅವು ಕಾರ್ಯರೂಪದಲ್ಲಿದ್ದರೆ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಂತಹ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಪತ್ರಗಳು ಕೊನೆಗೊಂಡು ಶೂನ್ಯವಾಗತಕ್ಕದ್ದು ಮತ್ತು ಅವು ಕಾರ್ಯರೂಪದಲ್ಲಿರತಕ್ಕದ್ದಲ್ಲ ಮತ್ತು ಅದಕ್ಕೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯನ್ನು ಪೂರ್ಣಕಾಲಿಕ ಆಧಾರದ ಮೇಲೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಾಗಿ ನಿಯೋಜಿಸ ತಕ್ಕದ್ದಲ್ಲ ಅಥವಾ ತೊಡಗಿಸತಕ್ಕದ್ದಲ್ಲ ಹಾಗೂ ಅವನ ಉದ್ಯೋಗದಾತನು ಅಂಥ ವ್ಯಕ್ತಿಯನ್ನು ಅಂಥ ಕೆಲಸದಿಂದ ತೆಗೆದು ಹಾಕತಕ್ಕದ್ದು, ಆದರೆ ಆ ವ್ಯಕ್ತಿಯ ಇಚ್ಛೆಗೆ ಒಳಪಟ್ಟು ಕನಿಷ್ಠ ಪಕ್ಷ ಅದೇ ಉಪಲಬ್ಧಗಳಲ್ಲಿ ಅವನನ್ನು ಕೆಲಸದಲ್ಲಿ ಇಟ್ಟುಕೊಳ್ಳ ತಕ್ಕದ್ದು ಮತ್ತು ಅವನಿಗೆ ಮ್ಯಾನ್ಯುಯಲ್

ಸ್ಕ್ಯಾವೆಂಜರ್ ಹೊರತಾದ ಕೆಲಸವನ್ನು ಗೊತ್ತುಪಡಿಸತಕ್ಕದ್ದು.

**7.** ಯಾರೇ ವ್ಯಕ್ತಿ, ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಏಜೆನ್ಸಿಯು, ಈ ಅಧಿನಿಯಮ ಪ್ರಾರಂಭವಾದ ದಿನಾಂಕದಂದು ಒಂದು ವರ್ಷದ ಅವಧಿಯು ಮೀರದಂತ ಯಾವುದೇ ದಿನಾಂಕದಂದು ರಾಜ್ಯ ಸರ್ಕಾರವು, ಅಧಿಸೂಚಿಸ ಬಹುದಾದಂತಹ ದಿನಾಂಕದಿಂದ ಯಾರೇ ವ್ಯಕ್ತಿಯನ್ನು ಒಳಚರಂಡಿ ಮತ್ತು ರೊಚ್ಚಿತೊಟ್ಟಿ (Septic tank) ಗಳನ್ನು ಸ್ವಚ್ಛಗೊಳಿಸುವಂತಹ ಅಪಾಯಕಾರಿ ಕೆಲಸಕ್ಕೆ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ತೊಡಗಿಸತಕ್ಕದ್ದಲ್ಲ ಅಥವಾ ನಿಯೋಜಿಸತಕ್ಕದ್ದಲ್ಲ.

ಒಳಚರಂಡಿ ಮತ್ತು ರೊಚ್ಚು ತೊಟ್ಟಿ (Septic tank) ಗಳನ್ನು ಸ್ವಚ್ಛಗೊಳಿಸುವಂತಹ ಅಪಾಯಕಾರಿ ಕೆಲಸಕ್ಕೆ ವ್ಯಕ್ತಿಗಳನ್ನು ತೊಡಗಿಸಿಕೊಳ್ಳುವುದನ್ನು ಅಥವಾ ನಿಯೋಜನೆ ಮಾಡುವುದನ್ನು ನಿಷೇಧಿಸುವುದು.

**8.** 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೊದಲ ಸಲ ಉಲ್ಲಂಘಿಸಿದ್ದಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ಮತ್ತು ತರುವಾಯದ ಯಾವುದೇ ಉಲ್ಲಂಘನೆಗಾಗಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

5ನೇ ಪ್ರಕರಣ ಅಥವಾ 6ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.

**9.** 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೊದಲ ಸಲ ಉಲ್ಲಂಘಿಸಿದ್ದಕ್ಕಾಗಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯಕಾರವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ಮತ್ತು ತರುವಾಯದ ಯಾವುದೇ ಉಲ್ಲಂಘನೆಗಾಗಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

7ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.

**10.** ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದ್ದು, ಆ ಅಪರಾಧವು ಸಂಭವಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಯಾರೇ ವ್ಯಕ್ತಿಯು ಆ ಬಗ್ಗೆ ದೂರನ್ನು ಸಲ್ಲಿಸಿದ್ದ ಹೊರತು, ಯಾವುದೇ ನ್ಯಾಯಾಲಯವು ಅದನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

ಪ್ರಾಸಿಕ್ಯೂಷನ್‌ನ ಕಾಲ ಪರಿಮಿತಿ.

# ಅಧ್ಯಾಯ – IV

## ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳನ್ನು ಗುರುತಿಸುವುದು ಮತ್ತು ಅವರ ಪುನರ್ವಸತಿ

**11.** (1) ಯಾವುದೇ ಪುರಸಭೆಯು ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್ ಕೆಲಸದಲ್ಲಿ ಕೆಲವು ವ್ಯಕ್ತಿಗಳನ್ನು ತೊಡಗಿಸಿವೆ ಅಥವಾ ನಿಯೋಜನೆಗೊಳಿಸಿದೆ ಎಂದು ನಂಬಲು ಕಾರಣವಿದ್ದರೆ, ಅಂಥ ಪುರಸಭೆಯ ಕಾರ್ಯನಿರ್ವಾಹಕ ಅಧಿಕಾರಿಯು ಅಂಥ ವ್ಯಕ್ತಿಗಳನ್ನು ಗುರುತಿಸುವುದಕ್ಕೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸಮೀಕ್ಷೆ ನಡೆಸತಕ್ಕದ್ದು.

ಪುರಸಭೆಗಳು ನಗರ ಪ್ರದೇಶಗಳಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಮಾಡುವುದು.

(2) ಸಮೀಕ್ಷೆಯ ಅಂಶಗಳು ಮತ್ತು ಕ್ರಮಗಳು (1)ನೇ ಉಪಪ್ರಕರಣದಲ್ಲಿ ನಿಯಮಿಸ ಬಹುದಾಂದಂತಹ ರೀತಿಯಲ್ಲಿರತಕ್ಕದ್ದು ಮತ್ತು ಅಂಥ ಸಮೀಕ್ಷೆ ಕಾರ್ಯವು ನಗರಪಾಲಿಕೆಗಳ ಸಂದರ್ಭದಲ್ಲಿ ಅದು ಪ್ರಾರಂಭವಾದ ದಿನಾಂಕದಿಂದ ಎರಡು

ತಿಂಗಳ ಅವಧಿಯ ಒಳಗಾಗಿ ಮತ್ತು ಇತರ ಪುರಸಭೆಗಳ ಸಂದರ್ಭದಲ್ಲಿ ಒಂದು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳ್ಳತಕ್ಕದ್ದು.

(3) ಪುರಸಭೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಬೇಕು ಹಾಗೂ ಅದರ ನಿಖರತೆಗಾಗಿ ಮತ್ತು ಸಮೀಕ್ಷೆ ಕಾರ್ಯವನ್ನು ಸಕಾಲಿಕವಾಗಿ ಪೂರ್ಣಗೊಳಿಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

(4) ಸಮೀಕ್ಷೆ ಕಾರ್ಯ ಪೂರ್ಣಗೊಂಡ ತರುವಾಯ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಕೆಲಸ ಮಾಡುತ್ತಿರುವುದಾಗಿ ಕಂಡುಬಂದ ವ್ಯಕ್ತಿಗಳ ಒಂದು ತಾತ್ಕಾಲಿಕ ಪಟ್ಟಿಯನ್ನು ನಿಯಮಿಸಬಹುದಾದ ಅರ್ಹತಾ ಷರತ್ತುಗಳನ್ನು ಪಾಲಿಸುವ ಮೂಲಕ ಸಿದ್ಧಪಡಿಸತಕ್ಕದ್ದು ಮತ್ತು ಅಂತಹ ತಾತ್ಕಾಲಿಕ ಪಟ್ಟಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸತಕ್ಕದ್ದು ಮತ್ತು ಸಾರ್ವಜನಿಕರಿಂದ ಆ ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು.

(5) ಯಾವುದೇ ಆಕ್ಷೇಪಣೆ ಇರುವ ಯಾರೇ ವ್ಯಕ್ತಿಯು (4)ನೇ ಅನುಸರಣೆಯಿಂದ ಪ್ರಕಟಿಸಲಾದ ತಾತ್ಕಾಲಿಕ ಪಟ್ಟಿಯಲ್ಲಿ ಯಾವುದೇ ಹೆಸರನ್ನು ಸೇರಿಸುವುದಕ್ಕಾಗಲೀ ಅಥವಾ ಬಿಟ್ಟು ಬಿಡುವುದಕ್ಕಾಗಲೀ ಅಂಥ ಪ್ರಕಟಣೆಯನ್ನು ಹೊರಡಿಸಿದ ಹದಿನೈದು ದಿನಗಳ ಅವಧಿಯೊಳಗೆ ಪುರಸಭೆಯು ಅಧಿಸೂಚಿಸದಂತಹ ನಮೂನೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ತನ್ನ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

(6) (5)ನೇ ಉಪ ಪ್ರಕರಣದ ಅನುಸಾರ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ತದನಂತರ ಪುರಸಭೆಯ ಸ್ಥಳೀಯ ಪರಿಮಿತಿಯೊಳಗೆ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಕೆಲಸ ಮಾಡುತ್ತಿರುವುದಾಗಿ ಕಂಡುಬರುವ ವ್ಯಕ್ತಿಗಳ ಅಂತಿಮ ಪಟ್ಟಿಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(7) (6)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಮಲಹೊರುವ ಜಾಡಮಾಲಿಗಳ ಅಂತಿಮ ಪಟ್ಟಿಯನ್ನು ಕೂಡಲೇ ಪ್ರಕಟಿಸತಕ್ಕದ್ದು ಹಾಗೂ ಸದರಿ ಪಟ್ಟಿಯಲ್ಲಿ ಒಳಗೊಂಡ ವ್ಯಕ್ತಿಗಳನ್ನು 6ನೇ ಪ್ರಕರಣದ (2) ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಮಲಹೊರುವ ಜಾಡಮಾಲಿಗಳ ಕೆಲಸ ಮಾಡುವ ಯಾವುದೇ ಬಾಧ್ಯತೆಯಿಂದ ವಿಮೋಚನೆಗೊಳಿಸತಕ್ಕದ್ದು.

ನಗರ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕೆಲಸ ಮಾಡು ವುದನ್ನು ಗುರುತಿಸುವು ದಕ್ಕಾಗಿ ಅರ್ಜಿ

**12.** (1) ನಗರ ಪ್ರದೇಶದಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್ ಕೆಲಸ ಮಾಡುವ ಯಾರೇ ವ್ಯಕ್ತಿಯು, 11ನೇ ಪ್ರಕರಣದ ಅನುಸಾರವಾಗಿ ಪುರಸಭೆಯು ಕೈಗೊಂಡ ಸಮೀಕ್ಷೆಯ ಅವಧಿಯಲ್ಲಾಗಲೀ, ಅವನು ಯಾರ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವನೋ ಆಗ ಅಥವಾ ತದನಂತರ ಯಾವುದೇ ಸಮಯದಲ್ಲಿ ನಿಯಮಿಸಬಹುದಾದಂತ ರೀತಿಯಲ್ಲಿ ನಗರ ಪಾಲಿಕೆಯಲ್ಲಿ ಮುಖಕಾರ್ಯನಿರ್ವಹಣಾಧಿಕಾರಿಗೆ ಅಥವಾ ಮ್ಯಾನ್ಯುಯಲ್‌ಸ್ಕ್ಯಾವೆಂಜರ್ ಕೆಲಸ ಮಾಡುತ್ತಿರುವವರನ್ನು ಗುರುತಿಸುವುದಕ್ಕಾಗಿ ಇವರಿಂದ ಅಧಿಕೃತ ವಾಗಿರುವಂತಹ ಯಾರೇ ಇತರ ಅಧಿಕಾರಿಗೆ ಅವನು ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಮುಖ್ಯ

ಕಾರ್ಯನಿರ್ವಹಣಾಧಿಕಾರಿಯು, 11ನೇ ಪ್ರಕರಣದ ಮೇರೆಗೆ ಕೈಗೊಂಡ ಸಮೀಕ್ಷೆಯ ಭಾಗವಾಗಿಯಾಗಲೀ ಅಥವಾ ಅಂಥ ಸಮೀಕ್ಷೆಯ ಪ್ರಗತಿಯಲ್ಲಿ ಇಲ್ಲದಿರುವಾಗ, ಅಂಥ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅರ್ಜಿದಾರನು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂಬುದನ್ನು ಖಚಿತಪಡಿಸಿ ಕೊಳ್ಳಲು ಆ ಬಗ್ಗೆ ವಿಚಾರಣೆ ನಡೆಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ್ದು, 11ನೇ ಪ್ರಕರಣದ ಮೇರೆಗಿನ ಸಮೀಕ್ಷೆಯ ಪ್ರಗತಿಯಲ್ಲಿ ಇಲ್ಲದಿರುವಾಗ (2)ನೇ ಉಪ ಪ್ರಕರಣದ ಅನುಸಾರವಾಗಿ, ವಿಚಾರಣೆ ನಡೆಸಿದ ತರುವಾಯ, ಅರ್ಜಿಯಲ್ಲಿ ತಿಳಿಸಿರುವುದು ಸತ್ಯವೆಂದು ಕಂಡು ಬಂದರೆ, 11ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ಪ್ರಕಟಿಸಿದ ಅಂತಿಮ ಪಟ್ಟಿಗೆ ಅಂಥ ವ್ಯಕ್ತಿಯ ಹೆಸರನ್ನು ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಅದರ ಕಾರಣದಿಂದಾಗಿ (7)ನೇ ಉಪ ಪ್ರಕರಣದಲ್ಲಿ ನಮೂದಿಸಿದ ಪರಿಣಾಮಗಳನ್ನು ಅನುಸರಿಸತಕ್ಕದ್ದು.

ಪುರಸಭೆಗಳಿಂದ ಗುರುತಿಸಲ್ಪಟ್ಟ ಮ್ಯಾನ್ಯು ಯಲ್ ಸ್ಕ್ಯಾವೆಂಜರ್ ವ್ಯಕ್ತಿಗಳ ಪುನರ್ವಸತಿ.

**13.** (1) 11ನೇ ಪ್ರಕರಣದ (6)ನೇ ಉಪಪ್ರಕರಣದ ಅನುಸಾರವಾಗಿ ಪ್ರಕಟಿಸಿದ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿಯಲ್ಲಿ ಒಳಗೊಂಡ ಅಥವಾ 12ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಅದರಲ್ಲಿ ಸೇರಿಸಿದ ಯಾರೇ ವ್ಯಕ್ತಿಗೆ ಈ ಕೆಳಕಂಡ ರೀತಿಯಲ್ಲಿ ಪುನರ್ವಸತಿಯನ್ನು ಕಲ್ಪಿಸತಕ್ಕದ್ದು ಎಂದರೆ:–

(ಎ) ಅವನಿಗೆ ಒಂದು ತಿಂಗಳ ಒಳಗಾಗಿ :–

(i) ಅವನನ್ನು ಅವಲಂಬಿತವಾದ ಅವನ ಕುಟುಂಬದ ಎಲ್ಲಾ ಸದಸ್ಯರುಗಳ ವಿವರಗಳು ಹಾಗೂ ಇತರ ವಿಷಯಗಳನ್ನೂ ಒಳಗೊಂಡ ಆತನ ಭಾವಚಿತ್ರವಿರುವ ಒಂದು ಗುರುತಿನ ಚೀಟಿಯನ್ನು ಮತ್ತು

(ii)ನಿಯಮಿಸಬಹುದಾದಂತಹ ರೀತಿಯಲ್ಲಿ, ಒಂದು ಬಾರಿ ಆರಂಭದಲ್ಲಿ ನಗದು ಸಹಾಯವನ್ನು ನೀಡತಕ್ಕದ್ದು.

(ಬಿ) ಅವನ ಮಕ್ಕಳು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರಗಳಿಂದ ಸಂಬಂಧಪಟ್ಟ ಯೋಜನೆಗೆ ಅನುಸಾರವಾಗಿ ವಿದ್ಯಾರ್ಥಿವೇತನಕ್ಕೆ ಹಕ್ಕುಳ್ಳವರಾಗಿರ ತಕ್ಕದ್ದು.

(ಸಿ) ಅವನಿಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಯುಕ್ತ ಯೋಜನೆಯ ಉಪಬಂಧಗಳಲ್ಲಿರುವಂತೆ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಅರ್ಹತೆಗೆ ಮತ್ತು ಇಚ್ಛೆಗೆ ಒಳಪಟ್ಟು ವಾಸಿಸಲು ಒಂದು ಫ್ಲಾಟ್‌ನ್ನು ಮತ್ತು ಮನೆ ನಿರ್ಮಾಣಕ್ಕಾಗಿ ಹಣಕಾಸು ನೆರವನ್ನು ಅಥವಾ ನಿರ್ಮಾಣಗೊಂಡ ಮನೆಯನ್ನು ಹಣಕಾಸು ನೆರವಿನೊಂದಿಗೆ ಹಂಚಿಕೆ ಮಾಡತಕ್ಕದ್ದು.

(ಡಿ) ಅವನಿಗೆ ಅಥವಾ ಕೊನೆ ಪಕ್ಷ ಅವನ ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಅರ್ಹತೆ ಮತ್ತು ಅವನ ಇಚ್ಛೆಗೆ ಒಳಪಟ್ಟು ಜೀವನೋಪಾಯದ ಕೌಶಲ್ಯ ತರಬೇತಿಯನ್ನು ನೀಡತಕ್ಕದ್ದು ಮತ್ತು ಇಂಥ ತರಬೇತಿಯ ಕಾಲಾವಧಿಯಲ್ಲಿ ಮೂರು ಸಾವಿರ ರೂಪಾಯಿಗಳಿಗಿಂತಲೂ ಕಡಿಮೆ ಯಿಲ್ಲದ ವೃತ್ತಿವೇತನವನ್ನು ಪ್ರತಿ ತಿಂಗಳು ಸಂದಾಯ ಮಾಡತಕ್ಕದ್ದು.

(ಇ) ಅವನಿಗೆ ಅಥವಾ ಕೊನೆಪಕ್ಷ ಅವನ ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ, ಅರ್ಹತೆ ಮತ್ತು ಅವನ ಇಚ್ಛೆಗೆ ಒಳಪಟ್ಟು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಯುಕ್ತ ಯೋಜನೆಯಲ್ಲಿ ಗೊತ್ತು ಮಾಡಬಹುದಾದಂತಹ

ರೀತಿಯಲ್ಲಿ ಸಮರ್ಥನೀಯವಾದ ಆಧಾರದ ಮೇಲೆ ಒಂದು ಪರ್ಯಾಯದ ಉದ್ಯೋಗವನ್ನು ಮಾಡುವುದಕ್ಕಾಗಿ ಸಹಾಯಧನ ಮತ್ತು ರಿಯಾಯಿತಿ ಸಾಲವನ್ನು ನೀಡತಕ್ಕದ್ದು.

(ಎಫ್) ಅವನಿಗೆ ಈ ಬಗ್ಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತಹ ಇತರ ಕಾನೂನು ಮತ್ತು ಕ್ರಮಬದ್ಧವಾದ ನೆರವನ್ನು ಒದಗಿಸತಕ್ಕದ್ದು.

(2) ಸಂಬಂಧಪಟ್ಟ ಜಿಲ್ಲೆಯ ಎಲ್ಲಾ ಮ್ಯಾಜಿಸ್ಟ್ರೇಟನು(1) ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪ್ರತಿಯೊಬ್ಬ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಹೊಣೆಗಾರನಾಗಿರತಕ್ಕದ್ದು ಮತ್ತು ಇದರ ಜೊತೆಯಲ್ಲಿ ಸಂಬಂಧಪಟ್ಟ ರಾಜ್ಯಸರ್ಕಾರದ ಅಥವಾ ಜಿಲ್ಲಾ ಮ್ಯಾಜಿಸ್ಟೇಟ್‌ನ ಪರವಾಗಿ ಕೆಲಸ ನಿರ್ವಹಿಸುವ ತನ್ನ ಅಧೀನ ಅಧಿಕಾರಿಗಳಿಗೆ ಮತ್ತು ಸಂಬಂಧ ಪಟ್ಟ ಪುರಸಭೆಯ ಅಧಿಕಾರಿಗಳಿಗೆ ಈ ಬಗ್ಗೆ ಕಾರ್ಯನಿರ್ವಹಿಸಲು ಜವಾಬ್ದಾರಿಗಳನ್ನು ವಹಿಸಬಹುದು.

ಪಂಚಾಯಿತಿಗಳು ಗ್ರಾಮೀಣ ಪ್ರದೇಶದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ನಡೆಸುವುದು.

**14.** ಯಾವುದೇ ಪಂಚಾಯಿತಿಯ ಅಧಿಕಾರ ವ್ಯಾಪ್ತಿ ಇರುವ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸದಲ್ಲಿ ಕೆಲವು ವ್ಯಕ್ತಿಗಳನ್ನು ಗುರುತಿಸುವುದಕ್ಕೆ 11 ಮತ್ತು 12ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ, ಯಥೋಚಿತ ವ್ಯತ್ಯಾಸಗಳೊಂದಿಗೆ, ಅಂತಹ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆಯನ್ನು ಕೈಗೊಳ್ಳತಕ್ಕದ್ದು.

ಗ್ರಾಮೀಣ ಪ್ರದೇಶದಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಕೆಲಸ ಮಾಡುವುದನ್ನು ಗುರುತಿಸುವುದಕ್ಕಾಗಿ ಅರ್ಜಿ

**15.** (1) ಗ್ರಾಮೀಣ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿಯು, 14ನೇ ಪ್ರಕರಣದ ಅನುಸಾರ ಅವನು ಯಾವ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ ಕೆಲಸ ಮಾಡುತ್ತಿರುವನೋ ಆ ಪಂಚಾಯಿತಿಯು ಕೈಗೊಂಡ ಸಮೀಕ್ಷೆಯ ಅವಧಿಯಲ್ಲಾಗಲೀ ಅಥವಾ ತದನಂತರದ ಯಾವುದೇ ಸಮಯದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಸಂಬಂಧಪಟ್ಟ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಈ ಸಂಬಂಧವಾಗಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸ ಮಾಡುತ್ತಿರುವವರನ್ನು ಗುರುತಿಸುವ ಸಲುವಾಗಿ ಆತನಿಂದ ಅಧಿಕೃತನಾದ ಯಾರೇ ಇತರ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ, ಮುಖ್ಯಕಾರ್ಯ ನಿರ್ವಾಹಣಾಧಿಕಾರಿಯು, 14ನೇ ಪ್ರಕರಣದ ಮೇರೆಗೆ ಕೈಗೊಂಡ ಸಮೀಕ್ಷೆಯ ಭಾಗವಾಗಿಯಾಗಲೀ ಅಥವಾ ಅಂಥ ಸಮೀಕ್ಷೆಯು ಪ್ರಗತಿಯಲ್ಲಿ ಇಲ್ಲದಿರುವಾಗ, ಅಂಥ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅರ್ಜಿದಾರನು ಮ್ಯಾನ್ಯುಯಲ್‌ಸ್ಕ್ಯಾವೆಂಜರ್ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಆ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು.

ಪಂಚಾಯಿತಿಗಳಿಂದ ಗುರುತಿಸಲ್ಪಟ್ಟ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ವ್ಯಕ್ತಿಗಳ ಪುನರ್ವಸತಿ:

**16.** 14ನೇ ಪ್ರಕರಣದ ಅನುಸಾರವಾಗಿ ಪ್ರಕಟಿಸಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅಂತಿಮ ಪಟ್ಟಿಯಲ್ಲಿ ಒಳಗೊಂಡ ಅಥವಾ 15ನೇ ಪ್ರಕರಣದ (2)ನೇ ಉಪ ಪ್ರಕರಣದ ಅನುಸಾರವಾಗಿ ಅದರಲ್ಲಿ ಸೇರ್ಪಡೆಗೊಂಡ ಯಾರೇ ವ್ಯಕ್ತಿಗೆ ನಗರ ಪ್ರದೇಶದ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ 13ನೇ ಪ್ರಕರಣದಲ್ಲಿ ಹೇಳಲಾದ ರೀತಿಯಲ್ಲಿಯೇ ಯಥೋಚಿತ ವ್ಯತ್ಯಾಸಗಳೊಂದಿಗೆ ಪುನರ್ವಸತಿಯನ್ನು ಕಲ್ಪಿಸತಕ್ಕದ್ದು.

# ಅಧ್ಯಾಯ – V

## ಅನುಷ್ಠಾನ ಪ್ರಾಧಿಕಾರಿಗಳು

**17.** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಈ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಒಂಭತ್ತು ತಿಂಗಳ ಅವಧಿಯ ಮುಕ್ತಾಯದ ತರುವಾಯ ತಿಳುವಳಿಕೆ ನೀಡುವ ಶಿಬಿರಗಳನ್ನು ನಡೆಸುವ ಮುಖಾಂತರ ಅಥವಾ ಅಂತಹ ಇತರ ರೀತಿಯಲ್ಲಿ:

ನೈರ್ಮಲ್ಯರಹಿತ ಶೌಚಾಲಯಗಳನ್ನು ಕೈ ಬಿಟ್ಟಿರುವುದನ್ನು ಖಚಿತಪಡಿಸಿಕೊಳ್ಳಲು ಸ್ಥಳೀಯ ಪ್ರಾಧಿಕಾರಿಗಳ ಹೊಣೆಗಾರಿಕೆ.

(i) ಅವುಗಳ ಅಧಿಕಾರ ವ್ಯಾಪ್ತಿಗೊಳಗಿನ ಪ್ರದೇಶದಲ್ಲಿ ನೈರ್ಮಲ್ಯ ರಹಿತ ಶೌಚಾಲಯಗಳನ್ನು ನಿರ್ಮಿಸಿರುವುದಿಲ್ಲ, ನಿರ್ವಹಿಸುತ್ತಿರುವುದಿಲ್ಲ ಮತ್ತು ಬಳಕೆ ಮಾಡುತ್ತಿರುವುದಿಲ್ಲ ಮತ್ತು

(ii) (1)ನೇ ಖಂಡವನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ 5ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಶೌಚಾಲಯದ ಅನುಭೋಗದಾರನ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಅವುಗಳ ಜವಾಬ್ದಾರಿಯಾಗಿರತಕ್ಕದ್ದು.

**18.** ಸಮುಚಿತ ಈ ಅಧಿನಿಯಮದ ಉಪಬಂಧಗಳನ್ನು ಯುಕ್ತವಾಗಿ ಕಾರ್ಯಗತ ಗೊಳಿಸಲಾಗುತ್ತದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಅವಶ್ಯಕವೆನಿಸಬಹುದಾದಂತಹ ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಅಂತಹ ಅಧಿಕಾರಗಳನ್ನು ಪ್ರಧಾನ ಮಾಡಬಹುದು ಮತ್ತು ಅಂಥ ಕರ್ತವ್ಯಗಳನ್ನು ವಿಧಿಸಬಹುದು. ಒಂದು ಸ್ಥಳೀಯ ಪ್ರಾಧಿಕಾರ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು ಹಾಗೆ ಪ್ರಧಾನ ಮಾಡಿದ ಅಥವಾ ವಿಧಿಸಿದ ಎಲ್ಲ ಅಥವಾ ಯಾವುದೇ ಅಧಿಕಾರಿಗಳನ್ನು ಚಲಾಯಿಸಲು ಮತ್ತು ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನೆರವೇರಿಸಲು ಅಧೀನ ಅಧಿಕಾರಿಗಳಿಗೆ ಸ್ಪಷ್ಟವಾಗಿ ನಿರ್ದಿಷ್ಟಪಡಿಸಬಹುದು ಮತ್ತು ಹಾಗೆನಿರ್ದಿಷ್ಟಪಡಿಸಿದ ಅಧಿಕಾರಿ ಅಥವಾ ಅಧಿಕಾರಿಗಳು ಅಂಥ ಅಧಿಕಾರಗಳನ್ನು ಅಥವಾ ಅಂಥ ಕರ್ತವ್ಯಗಳನ್ನು ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ನಿರ್ದಿಷ್ಟ ಪಡಿಸಬಹುದಾದ ಪ್ರಾಧಿಕಾರಿಗಳು

**19.** 18ನೇ ಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಅಧಿಕೃತ ಅಧಿಕಾರಿಯು ಆ ಪ್ರಕರಣದ ಮೇರೆಗೆ ಅವರಿಂದ ನಿರ್ದಿಷ್ಟಪಡಿಸಿದ ಇತರ ಯಾರೇ ಅಧೀನ ಅಧಿಕಾರಿಗಳು ಈ ಅಧಿನಿಯಮದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾದ ತರುವಾಯ :

ಜಿಲ್ಲಾ ಮ್ಯಾಜಿಸ್ಟ್ರೇಟರ ಮತ್ತು ಅಧಿಕೃತ ಅಧಿಕಾರಿಗಳ ಕರ್ತವ್ಯಗಳು.

(ಎ) ತಮ್ಮ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಯಾರೇ ವ್ಯಕ್ತಿಯು ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಕೆಲಸದಲ್ಲಿ ನಿರತನಾಗಿಲ್ಲವೆಂಬುದನ್ನು ಮತ್ತು ನಿಯೋಜನೆಗೊಂಡಿಲ್ಲವೆಂಬುದನ್ನು;

(ಬಿ) ಯಾವೊಂದೂ ನೈರ್ಮಲ್ಯರಹಿತ ಶೌಚಾಲಯ ನಿರ್ಮಾಣಗೊಂಡಿಲ್ಲವೆಂಬುದನ್ನು, ಅದರ ನಿರ್ವಹಣೆ ಮಾಡಿಲ್ಲ ಎಂಬುದನ್ನು, ಅದರ ಬಳಕೆಯಾಗದಿರುವ ಬಗ್ಗೆ ಅಥವಾ ಬಳಕೆಗೆ ಲಭ್ಯವಿಲ್ಲ ಎಂಬುದನ್ನು;

(ಸಿ) ಈ ಅಧಿನಿಯಮದ ಮೇರೆಗೆ ಗುರುತಿಸಲ್ಪಟ್ಟ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳಿಗೆ 13ನೇ ಪ್ರಕರಣದ ಅಥವಾ ಸಂದರ್ಭಾನುಸಾರ 16ನೇ ಪ್ರಕರಣದ ಅನುಸಾರವಾಗಿ ಪುನರ್ವಸತಿ ಕಲ್ಪಿಸಲಾಗಿದೆ ಎಂಬುದನ್ನು;

(ಡಿ) 5ನೇ ಪ್ರಕರಣ ಅಥವಾ 6ನೇ ಪ್ರಕರಣ ಅಥವಾ 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಚಾರಣೆ ಮಾಡಿರುವುದನ್ನು ಮತ್ತು ಆ ಬಗ್ಗೆ ಕ್ರಮಜರುಗಿಸುವುದನ್ನು ಮತ್ತು

ಇ) ತನ್ನ ಅಧಿಕಾರ ವ್ಯಾಪ್ತಿಯೊಳಗೆ ಅನ್ವಯವಾಗುವ ಈ ಅಧಿನಿಯಮದ ಎಲ್ಲಾ

ಉಪಬಂಧಗಳನ್ನು ಯುಕ್ತವಾಗಿ ಪಾಲನೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು

ಇನ್ಸ್‌ಪೆಕ್ಟರ್ ನೇಮಕ ಮತ್ತು ಅವರ ಅಧಿಕಾರಗಳು.

**20.** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳನ್ನು ಇನ್ಸ್‌ಪೆಕ್ಟರ್‌ಗಳನ್ನಾಗಿ ನೇಮಕ ಮಾಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ಅವರು ತಮ್ಮ ಅಧಿಕಾರಗಳನ್ನು ಚಲಾಯಿಸಲು ಅವರಿಗೆ ಸ್ಥಳೀಯ ಪರಿಮಿತಿಗಳನ್ನು ಗೊತ್ತುಪಡಿಸತಕ್ಕದ್ದು.

(2) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಬರುವ ಯಾವುದೇ ಆವರಣಗಳನ್ನು ಅಥವಾ ಸ್ಥಳವನ್ನು ತಾನು ಅವಶ್ಯವೆಂದು ಪರಿಗಣಿಸುವಂತಹ ನೆರವಿನೊಂದಿಗೆ ಎಲ್ಲಾ ಯುಕ್ತ ಸಮಯದಲ್ಲಿ ಪ್ರವೇಶ ಮಾಡಬಹುದು.

ಎ) ಈ ಅಧಿನಿಯಮದ ಮೇರೆಗೆ ಒಂದು ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಮಾಡಲಾಗುತ್ತಿದೆಯೆಂದು ಅಥವಾ ಮಾಡಲಿರುವುದಾಗಿ ನಂಬಲು ತನಗೆ ಕಾರಣವಿದೆಯೋ ಆ ಯಾವುದೇ ಆವರಣಗಳನ್ನು ಅಥವಾ ಸ್ಥಳವನ್ನು ತಪಾಸಣೆ ಮಾಡುವ ಅಥವಾ ಯಾವುದೇ ಶೌಚಾಲಯ, ತೆರೆದ ಚರಂಡಿ ಅಥವಾ ಗುಂಡಿಯನ್ನು ಪರೀಕ್ಷಿಸುವ ಅಥವಾ ಶೋಧನೆ ಮಾಡುವ ಮತ್ತು ಯಾರೇ ವ್ಯಕ್ತಿಯನ್ನು ಮಲ ಹೊರುವ ಜಾಡಮಾಲಿಯಾಗಿ ನಿಯೋಜಿಸಿರುವುದನ್ನು ಪ್ರತಿಬಂಧಿಸುವ;

ಬಿ) ಅಂಥ ಆವರಣಗಳಲ್ಲಿ ಅಥವಾ ಸ್ಥಳಗಳಲ್ಲಿ ಕಂಡುಬರುವ ಯಾರೇ ವ್ಯಕ್ತಿಯನ್ನು ಮತ್ತು ಅಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳನ್ನು ನಿಯೋಜಿಸಲಾಗಿದೆ ಎಂದು ಅವನಿಗೆ ಯುಕ್ತವಾಗಿನಂಬಲು ಕಾರಣವಿರುವ ಯಾರೇ ವ್ಯಕ್ತಿಯನ್ನು ವಿಚಾರಣೆ ಮಾಡುವ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲನೆ ಮಾಡಿರುವ ಅಥವಾ ಪಾಲನೆ ಮಾಡದಿರುವ ಬಗ್ಗೆ ಮಾಹಿತಿಯನ್ನು ಸಿದ್ಧಪಡಿಸುವ ಅನ್ಯಥಾ ಮಾರ್ಗದ ;

ಸಿ) ಅಂಥ ಆವರಣಗಳಲ್ಲಿ ಕಂಡು ಬಂದ ಯಾರೇ ವ್ಯಕ್ತಿಯನ್ನು, ಅಂಥ ಆವರಣದಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳನ್ನು ನಿಯೋಜಿಸಿದ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳಿಗೆ ಸಂಬಂಧಿಸಿದ ಮತ್ತು ಅವರನ್ನು ಮಲ ಹೊರುವ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಕೆಲಸಕ್ಕೆ ನಿಯೋಜಿಸಿದ ಅಥವಾ ತೊಡಗಿಸಿದ ವ್ಯಕ್ತಿಗಳು ಅಥವಾ ಏಜೆನ್ಸಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವಂತೆ ತನ್ನ ಅಧಿಕಾರ ಬಲದಿಂದ ಅಗತ್ಯಪಡಿಸುವ;

ಡಿ) ಈ ಅಧಿನಿಯಮದ ಮೇರೆಗೆ ಪ್ರಧಾನ ಉದ್ಯೋಗದಾತನ ಅಥವಾ ಏಜೆನ್ಸಿಯ ಕಡೆಯಿಂದ ಒಂದು ಅಪರಾಧವನ್ನು ಎಸಗಲಾಗಿದೆ ಎಂದು ನಂಬಲು ಕಾರಣವಿರುವ ಸಂಬಂಧದಲ್ಲಿ ಅವನು ಈ ಬಗ್ಗೆ ಯುಕ್ತವೆಂದು ಪರಿಗಣಿಸಬಹುದಾದಂತಹ ರಿಜಿಸ್ಟರ್‌ಗಳನ್ನು ಮಜೂರಿಗಳ ಅಥವಾ ನೋಟೀಸುಗಳ ಅಥವಾ ಅದರ ಭಾಗಗಳ ದಾಖಲೆಯನ್ನು ಜಪ್ತಿ ಮಾಡುವ ಅಥವಾ ಅದರ ಪ್ರತಿಗಳನ್ನು ವಶಕ್ಕೆ ತೆಗೆದುಕೊಳ್ಳುವ ಮತ್ತು

ಇ) ಈ ಸಂಬಂಧದಲ್ಲಿ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು ಇನ್ಸ್‌ಪೆಕ್ಟರನು –

(3) (2)ನೇ ಉಪಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನು ಅಗತ್ಯವೆನಿಸಿದ ಯಾವುದೇ ಮಾಹಿತಿಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವುದು ಭಾರತ ದಂಡಸಂಹಿತೆಯ 175ನೇ ಪ್ರಕರಣ ಮತ್ತು 176ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡುವುದುಕಾನೂನುಬದ್ಧವೆಂದು ಭಾವಿಸತಕ್ಕದ್ದು. 45ರ 1860

(4) ದಂಡ ಪ್ರಕ್ರಿಯಾ ಸಂಹಿತೆ 1973ರ ಉಪಬಂಧಗಳು (2)ನೇ ಉಪಪ್ರಕರಣದ ಮೇರೆಗೆ ಅಂತಹ ಯಾವುದೇ ಶೋಧನೆಗೆ ಅಥವಾ ಜಪ್ತಿಗೆ ಅವು ಅನ್ವಯವಾಗ 2ರ 1974

ಬಹುದಾದಷ್ಟು ಮಟ್ಟಿಗೆ ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ಒಂದು ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಅಂಥ ಶೋಧನೆಗೆ ಅಥವಾ ಜಪ್ತಿಗೆ ಅವು ಅನ್ವಯವಾಗತಕ್ಕದ್ದು.

## ಅಧ್ಯಾಯ – VI

## ಅಧಿ ವಿಚಾರಣೆಯ ಕಾರ್ಯವಿಧಾನ

ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರು ಅಪರಾಧಗಳನ್ನು ಅಧಿವಿಚಾರಣೆ ಮಾಡುವುದು

**21.** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆಗಾಗಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಇರುವಂಥ ಅಧಿಕಾರಗಳನ್ನು ಪ್ರಧಾನ ಮಾಡಬಹುದು; ಮತ್ತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು ತಮಗೆ ಹಾಗೆ ಪ್ರದತ್ತವಾದಂಥ ಅಧಿಕಾರಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ ಉದ್ದೇಶಗಳಿಗಾಗಿ ಚಲಾಯಿಸಲು ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಇರುವಂಥ ಅಧಿಕಾರಗಳೆಂದು ಭಾವಿಸತಕ್ಕದ್ದು. 2 ರ 1974

(2) ಈ ಅಧಿನಿಯಮದ ಮೇರೆಗೆ ಒಂದು ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಬಹುದು.

ಅಪರಾಧವು ವಿಚಾರಣೀಯವಾದುದು ಮತ್ತು ಜಾಮೀನೀಯವಲ್ಲದ್ದು ಆಗಿರುವುದು.

**22.** ದಂಡಪ್ರಕ್ರಿಯಾ ಸಂಹಿತೆ, 1973ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗ ಪ್ರತಿಯೊಂದು ಅಪರಾಧವು ವಿಚಾರಣೀಯವಾದುದಾಗಿರ ತಕ್ಕದ್ದು ಮತ್ತು ಜಾಮೀನೀಯವಲ್ಲದ್ದು ಆಗಿರತಕ್ಕದ್ದು. 2 ರ 1974

ಕಂಪನಿಗಳಿಂದ ಅಪರಾಧಗಳು.

**23.** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿ ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕೆ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧಕ ತಪ್ಪಿತಸ್ಥ ಎಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತನಾಗತಕ್ಕದ್ದು

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ :–

(ಎ)**'ಕಂಪನಿ'** ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ಮತ್ತು

ಬಿ) **'ನಿರ್ದೇಶಕ'** ಎಂದರೆ ಫರ್ಮಿಗೆ ಸಂಬಂಧಿಸಿದಂತೆ ಫರ್ಮಿನಲ್ಲಿದ್ದ ಒಬ್ಬ ಪಾಲುದಾರ.

## ಅಧ್ಯಾಯ – VII

## ಜಾಗೃತ ಸಮಿತಿಗಳು

**24.** (1) ಪ್ರತಿಯೊಂದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪವಿಭಾಗದಲ್ಲಿ ಒಂದು ಜಾಗೃತ ಸಮಿತಿಯನ್ನು ರಚಿಸತಕ್ಕದ್ದು. ಜಾಗೃತ ಸಮಿತಿಗಳು

(2) ಪ್ರತಿ ಜಿಲ್ಲೆಗೆ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ,

(ಎ) ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು – ಅಧ್ಯಕ್ಷರು, ಪದನಿಮಿತ್ತ ;

(ಬಿ) ಜಿಲ್ಲೆಯಿಂದ ಚುನಾಯಿತರಾದ ಅನುಸೂಚಿತ ಜಾತಿಗಳಿಗೆ ಸೇರಿದ ರಾಜ್ಯ ವಿಧಾನ ಮಂಡಲದ ಎಲ್ಲಾ ಸದಸ್ಯರು – ಸದಸ್ಯರು

ಪರಂತು, ಒಂದು ಜಿಲ್ಲೆಯಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದ ರಾಜ್ಯ ವಿಧಾನ ಮಂಡಲದ ಸದಸ್ಯರು ಇಲ್ಲದಿರುವಾಗ ರಾಜ್ಯ ಸರ್ಕಾರವು ಆ ಜಿಲ್ಲೆಯಿಂದ ಚುನಾಯಿತರಾದ ರಾಜ್ಯ ವಿಧಾನ ಮಂಡಲದ ಇತರ ಸದಸ್ಯರುಗಳಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಇಬ್ಬರನ್ನು ಮೀರದಂತೆ, ಅಂಥ ಸಂಖ್ಯೆಯ ಸದಸ್ಯರನ್ನು ನಾಮ ನಿರ್ದೇಶನ ಮಾಡಬಹುದು.

(ಸಿ) ಜಿಲ್ಲೆಯ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರವರು– ಸದಸ್ಯರು – ಪದನಿಮಿತ್ತ

(ಡಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ –

(i) ಜಿಲ್ಲಾಮಟ್ಟದ ಜಿಲ್ಲಾ ಪಂಚಾಯಿತಿಯ ಸದಸ್ಯರು – ಪದನಿಮಿತ್ತ

(ii) ಜಿಲ್ಲಾ ಕೇಂದ್ರ ಕಛೇರಿಯ ಪುರಸಭೆಯ ಸದಸ್ಯರು – ಪದನಿಮಿತ್ತ

(iii) ಜಿಲ್ಲೆಯಲ್ಲಿ ರಚಿತವಾದ ಯಾವುದೇ ಇತರ ನಗರಪಾಲಿಕೆಯ ಸದಸ್ಯರು– ಪದನಿಮಿತ್ತ

(iv) ಜಿಲ್ಲೆಯಲ್ಲಿ ಯಾವುದಾದರೂ ದಂಡು ಪ್ರದೇಶದ ಮಂಡಳಿ ಸ್ಥಾಪನೆಯಾಗಿದ್ದರೆ ಅದರ ಸದಸ್ಯರು – ಪದನಿಮಿತ್ತ

(ಇ) ಜಿಲ್ಲೆಯಲ್ಲಿರುವ ರೈಲ್ವೆ ಪ್ರಾಧಿಕಾರವು ನಾಮ ನಿರ್ದೇಶನ ಮಾಡುವ ಒಬ್ಬ ಪ್ರತಿನಿಧಿ;

(ಎಫ್) ಜಿಲ್ಲೆಯಲ್ಲಿ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳಿಗೆ ಸೇರಿದ ಅಥವಾ ಮ್ಯಾನ್ಯುಯಲ್‌ಸ್ಕ್ಯಾವೆಂಜರ್‌ಗಳ ಸಮುದಾಯವನ್ನು ಪ್ರತಿನಿಧಿಸುವ, ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಜಿಲ್ಲೆಯ ಮ್ಯಾಜಿಸ್ಟ್ರೇಟ್‌ರವರಿಂದ ನಾಮ ನಿರ್ದೇಶಿತರಾದ, ನಾಲ್ಕು ಮಂದಿಯನ್ನು ಮೀರದಂತಹ ಸಾಮಾಜಿಕ ಕಾರ್ಯಕರ್ತರುಗಳು (ಅವರಲ್ಲಿ ಇಬ್ಬರು ಮಹಿಳೆಯರು ಇರತಕ್ಕದ್ದು.)

(ಜಿ) ಜಿಲ್ಲೆಯಲ್ಲಿ ಹಣಕಾಸು ಮತ್ತು ಪತ್ತಿನ ವ್ಯವಹಾರವನ್ನು ನಡೆಸುವ ಸಂಸ್ಥೆಗಳನ್ನು ಪ್ರತಿನಿಧಿಸುವಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ನಾಮನಿರ್ದೇಶಿತವಾದ ಒಬ್ಬ ವ್ಯಕ್ತಿ;

(ಹೆಚ್) ಜಿಲ್ಲಾ ಮಟ್ಟದ ಅನುಸೂಚಿತ ಜಾತಿಗಳ ಕಲ್ಯಾಣದ ಪ್ರಭಾರಿ ಅಧಿಕಾರಿ ಸದಸ್ಯ ಕಾರ್ಯದರ್ಶಿ– ಪದನಿಮಿತ್ತ

(ಐ) ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರ ಅಭಿಪ್ರಾಯದಲ್ಲಿ, ರಾಜ್ಯ ಸರ್ಕಾರದ ಯಾವುದಾದರೂ ಸಾಮಾನ್ಯ ಆದೇಶ ಇದ್ದರೆ, ಅದಕ್ಕೆ ಒಳಪಟ್ಟು ಈ ಅಧಿನಿಯಮದ ಉದ್ದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಹತ್ವದ

ಪಾತ್ರ ವಹಿಸುವ ಇಲಾಖೆಗಳು ಮತ್ತು ಏಜೆನ್ಸಿಗಳು ಯಾವುದಾದರೂ ಇದ್ದರೆ ಅವುಗಳ ಜಿಲ್ಲಾ ಮಟ್ಟದ ಅಧಿಕಾರಿಗಳು

(3) ಉಪ ವಿಭಾಗದ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಎಂದರೆ :

(ಎ) ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್‌ರವರು – ಅಧ್ಯಕ್ಷರು ಪದನಿಮಿತ್ತ

(ಬಿ) ಉಪ ವಿಭಾಗೀಯ ಮಧ್ಯವರ್ತಿ ಮಟ್ಟದಲ್ಲಿ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿ ನಿರ್ವಾಹಕರು, ಅಧಿಕಾರಿಗಳು ಮತ್ತು ಮಧ್ಯವರ್ತಿ ಮಟ್ಟದಲ್ಲಿ ಪಂಚಾಯಿತಿಗಳು ಅಸ್ತಿತ್ವದಲ್ಲಿ ಇಲ್ಲದಿದ್ದಲ್ಲಿ ಗ್ರಾಮಮಟ್ಟದಎರಡು ಪಂಚಾಯಿತಿಗಳಿಂದ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್‌ರವರು ನಾಮನಿರ್ದೇಶನ ಮಾಡುವ ಅಧ್ಯಕ್ಷರು– ಸದಸ್ಯರು ಪದನಿಮಿತ್ತ

(ಸಿ) ಉಪ ವಿಭಾಗೀಯ ಪೋಲೀಸ್ ಅಧಿಕಾರಿ–ಸದಸ್ಯರು ಪದನಿಮಿತ್ತ

(ಡಿ) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ–

(i) ಉಪ ವಿಭಾಗೀಯ ಕೇಂದ್ರ ಕಾರ್ಯಸ್ಥಳದಲ್ಲಿರುವ ಪುರಸಭೆಯ– ಸದಸ್ಯರು ಪದನಿಮಿತ್ತ ಮತ್ತು

(ii) ಉಪ ವಿಭಾಗದಲ್ಲಿ ದಂಡು ಪ್ರದೇಶ ಮಂಡಲಿ ಯಾವುದಾದರೂ ಇದ್ದರೆ ಅದರ ಪ್ರತಿನಿಧಿ–ಪದನಿಮಿತ್ತ

(ಇ) ಉಪ ವಿಭಾಗದಲ್ಲಿ ಇರುವ ರೈಲ್ವೆ ಪ್ರಾಧಿಕಾರವು ನಾಮನಿರ್ದೇಶನ ಮಾಡುವ ಒಬ್ಬ ಪ್ರತಿನಿಧಿ – ಸದಸ್ಯರು ಪದನಿಮಿತ್ತ

(ಎಫ್) ಉಪವಿಭಾಗದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳಿಗೆ ಸೇರಿದ ಅಥವಾ ಉಪವಿಭಾಗದಲ್ಲಿ ವಾಸಿಸುತ್ತಿರುವ ಸಮುದಾಯವನ್ನು ಪ್ರತಿನಿಧಿಸುವ ಜಿಲ್ಲಾ ಮ್ಯಾಜೀಸ್ಟ್ರೇಟ್ ಅವರಿಂದ ನಾಮನಿರ್ದೇಶಿತರಾದ ಇಬ್ಬರು ಸಾಮಾಜಿಕ ಕಾರ್ಯಕರ್ತರು (ಇವರಲ್ಲಿ ಒಬ್ಬರು ಮಹಿಳೆ ಇರತಕ್ಕದ್ದು.)

(ಜಿ) ಉಪವಿಭಾಗದಲ್ಲಿ ಹಣಕಾಸು ಮತ್ತು ಪತ್ತಿನ ವ್ಯವಹಾರವನ್ನು ನಡೆಸುವ ಸಂಸ್ಥೆಗಳನ್ನು ಪ್ರತಿನಿಧಿಸುವ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅವರಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ.

(ಹೆಚ್) ಉಪವಿಭಾಗ– ಮಟ್ಟದ ಅನುಸೂಚಿತ ಜಾತಿಗಳ ಕಲ್ಯಾಣದ ಪ್ರಭಾರಿ ಅಧಿಕಾರಿ–ಸದಸ್ಯ ಕಾರ್ಯದರ್ಶೀ, ಪದನಿಮಿತ್ತ

(ಐ) ಉಪವಿಭಾಗೀಯ ಮ್ಯಾಜಿಸ್ಟ್ರೇಟರ ಅಭಿಪ್ರಾಯದಲ್ಲಿ ರಾಜ್ಯ ಸರ್ಕಾರದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ ಯಾವುದೇ ಸಾಮಾನ್ಯ ಆದೇಶಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶವನ್ನುಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುವ ಇಲಾಖೆಯ ಮತ್ತು ಏಜೆನ್ಸಿಗಳ ಉಪವಿಭಾಗ ಮಟ್ಟದ ಅಧಿಕಾರಿಗಳು

(4) ಜಿಲ್ಲೆ ಮತ್ತು ಉಪವಿಭಾಗ ಮಟ್ಟದಲ್ಲಿ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಪ್ರತಿ ಮೂರು ತಿಂಗಳಲ್ಲಿ ಕನಿಷ್ಠ ಪಕ್ಷ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

(5) ಜಾಗೃತ ಸಮಿತಿಯ ರಚನೆಯಲ್ಲಿ ಕಂಡುಬರುವ ಯಾವುದೇ ನ್ಯೂನ್ಯತೆಯ ಕಾರಣ ಮಾತ್ರದಿಂದಲೇ ಅವುಗಳ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.

ಜಾಗೃತಿ ಸಮಿತಿಯ ಪ್ರಕಾರ್ಯಗಳು.

**25. ಜಾಗೃತಿ ಸಮಿತಿಯ ಕಾರ್ಯಗಳು :–**

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಯುಕ್ತವಾಗಿ ಅನುಷ್ಠಾನಗೊಳಿಸಲಾಗುತ್ತಿದೆಯೋ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಂದರ್ಭಾನುಸಾರ ಉಪ–ವಿಭಾಗೀಯ ಮ್ಯಾಜೀಸ್ಟ್ರೇಟಗೆ ಸಲಹೆಯನ್ನು ನೀಡುವುದು.

(ಬಿ) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿ ಬಗ್ಗೆ ಮೇಲ್ವಿಚಾರಣೆಯನ್ನು ಮಾಡುವುದು.

(ಸಿ) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ವಸತಿಗಾಗಿ ಸಾಕಷ್ಟು ಪತ್ತಿನ ಮಾರ್ಗಗಳ ಮೂಲಕ ಅನುಕೂಲ ಕಲ್ಪಿಸುವ ಸಂಬಂಧಪಟ್ಟ ಎಲ್ಲಾ ಏಜೆನ್ಸಿಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು.

(ಡಿ) ಈ ಅಧಿನಿಯಮದ ಮೇರೆಗೆ ದಾಖಲುಗೊಂಡ ಅಪರಾದಗಳ ನೋಂದಣಿಯನ್ನು ಮತ್ತು ಅವುಗಳ ವಿಚಾರಣೆ ನಡೆಸುವುದನ್ನು ಹಾಗೂ ಈ ಬಗ್ಗೆ ಕಾನೂನು ಕ್ರಮ ಜರುಗಿಸುವುದನ್ನು ಮೇಲ್ವಿಚಾರಣೆಮಾಡುವುದು.

**26. ರಾಜ್ಯ ಮೇಲ್ವಿಚಾರಣಾ ಸಮಿತಿ :**

**ರಾಜ್ಯ ಮೇಲ್ವಿಚಾರಣಾ ಸಮಿತಿ.**

(1)ಪ್ರತಿಯೊಂದು ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಒಂದು ರಾಜ್ಯ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು ಎಂದರೆ:

(ಎ) ರಾಜ್ಯದ ಮುಖ್ಯಮಂತ್ರಿ ಅಥವಾ ಅವರಿಂದ ನಾಮನಿರ್ದೇಶನಗೊಂಡ ಸಚಿವರು–ಅಧ್ಯಕ್ಷರು, ಪದನಿಮಿತ್ತ

(ಬಿ) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತಹ ಅನುಸೂಚಿತ ಜಾತಿಗಳ ಕಲ್ಯಾಣ ಅಂಥ ಇತರ ಇಲಾಖೆಯ ಪ್ರಭಾರಿ ಸಚಿವರು

(ಸಿ) ಸಫಾಯಿ ಕರ್ಮಚಾರಿಗಳ ಮತ್ತು ಅನುಸೂಚಿತ ಜಾತಿಗಳ ರಾಜ್ಯ ಆಯೋಗಗಳು ಯಾವುದಾದರೂ ಇದ್ದರೆ, ಅವುಗಳ ಅಧ್ಯಕ್ಷರು – ಸದಸ್ಯರು ಪದನಿಮಿತ್ತ

(ಡಿ) ಅನುಸೂಚಿತ ಜಾತಿಗಳ ಮತ್ತು ಸಫಾಯಿ ಕರ್ಮಜಾರಿಗಳ ರಾಷ್ಟ್ರೀಯ ಆಯೋಗಗಳ – ಸದಸ್ಯರು, ಪದನಿಮಿತ್ತ

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಅನುಸೂಚಿತ ಜಾತಿಗಳಿಗೆ ಸೇರಿರುವ ರಾಜ್ಯ ವಿಧಾನ ಮಂಡಲದ ಇಬ್ಬರು ಸದಸ್ಯರುಗಳಿಗಿಂತಲೂ ಕಡಿಮೆಯಿಲ್ಲದ ಸದಸ್ಯರು;

ಪರಂತು, ರಾಜ್ಯ ವಿಧಾನಮಂಡಲದಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದ ಸದಸ್ಯರಿಲ್ಲದಿದ್ದ ಪಕ್ಷದಲ್ಲಿ ರಾಜ್ಯ ಸರ್ಕಾರವು ಅನುಸೂಚಿತ ಪಂಗಡಗಳಿಗೆ ಸೇರಿದ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು ;

(ಎಫ್) ಪೊಲೀಸ್ ಮಹಾನಿರ್ದೇಶಕರು – ಸದಸ್ಯರು, ಪದನಿಮಿತ್ತ

(ಜಿ) ಗೃಹ, ಪಂಚಾಯತ್ ರಾಜ್, ನಗರ ಸ್ಥಳಿಯ ಸಂಸ್ಥೆಗಳ ಮತ್ತು ಅಂತಹ ಇತರ ಇಲಾಖೆಗಳಲ್ಲಿನ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ರಾಜ್ಯ ಸರ್ಕಾರದ ಕಾರ್ಯದರ್ಶಿಗಳು;

(ಹೆಚ್) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಜಿಲ್ಲಾ ಮಟ್ಟದಲ್ಲಿನ ಕಡೇ ಪಕ್ಷ ಒಂದು ನಗರ ಪಾಲಿಕೆಯ, ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಹಾಗೂ ದಂಡು ಪ್ರದೇಶದ ಮಂಡಳಿ ಮತ್ತು ರೈಲ್ವೆ ಪ್ರಾಧಿಕಾರ.

(ಐ) ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗೆ ಸೇರಿದ ಅಥವಾ ಮ್ಯಾನ್ಯುಯಲ್

ಸ್ಕ್ಯಾವೆಂಜರ್‌ಗಳಸಮುದಾಯವನ್ನು ಪ್ರತಿನಿಧಿಸುತ್ತಿರುವ, ಆ ರಾಜ್ಯದ ನಿವಾಸಿ ಯಾಗಿರುವ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ನಾಲ್ಕು ಮಂದಿ ಯನ್ನು ಮೀರದಂತಹ ಸಾಮಾಜಿಕ ಕಾರ್ಯಕರ್ತರು (ಅವರಲ್ಲಿ ಇಬ್ಬರು ಮಹಿಳೆಯರು ಇರತಕ್ಕದ್ದು).

(ಜೆ) ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿಯ ಸಂಚಾಲಕ ಬ್ಯಾಂಕ್‌ನ ರಾಜ್ಯಮಟ್ಟದ ಮುಖ್ಯಸ್ಥ– ಸದಸ್ಯರು ಪದನಿಮಿತ್ತ

(ಕೆ) ಅನುಸೂಚಿತ ಜಾತಿಗಳ ಅಭಿವೃದ್ಧಿಯ ಬಗ್ಗೆ ವ್ಯವಹರಿಸುವ ರಾಜ್ಯ ಸರ್ಕಾರದ ಇಲಾಖೆಯ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿ

(ಎಲ್)ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮವನ್ನು ಅನುಷ್ಠಾನ ಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಇಲಾಖೆಗಳ ಅಥವಾ ಇತರ ಏಜಿನ್ಸಿಗಳ ಅಂತಹ ಇತರೆ ಪ್ರತಿನಿಧಿಗಳು;

(2) ರಾಜ್ಯ ಮೇಲ್ವಿಚಾರಣಾ ಸಮಿತಿಯು, ಪ್ರತಿ ಆರು ತಿಂಗಳುಗಳಲ್ಲಿ ಕನಿಷ್ಟಪಕ್ಷ ಒಂದು ಬಾರಿಯಾದರೂ ಸಭೆ ಸೇರುತಕ್ಕದ್ದು ಮತ್ತು ನಿಯಮಿಸಬಹುದಾದ ಅದರ ಸಭೆಗಳಲ್ಲಿ ಕಾರ್ಯಕಲಾಪಗಳ ವ್ಯವಹರಣೆಗೆ ಸಂಬಂಧಿಸಿದಂತೆ ಕಾರ್ಯವಿಧಾನದ ಅಂತಹ ನಿಯಮಗಳನ್ನು ಪಾಲಿಸತಕ್ಕದ್ದು.

**27. ರಾಜ್ಯ ಮೇಲ್ವಿಚಾರಣಾ ಸಮಿತಿಯ ಕಾರ್ಯಗಳು :–**

ರಾಜ್ಯ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು

(ಎ) ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಪ್ರಾಧೀಕಾರಿಗಳು ಮಾಡುವ ಕೆಲಸಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು ಮತ್ತು ಸಲಹೆ ನೀಡುವುದು.

(ಬಿ) ಸಂಬಂಧಪಟ್ಟ ಎಲ್ಲಾ ಏಜಿನ್ಸಿಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು.

(ಸಿ) ಈ ಅಧಿನಿಯಮವನ್ನು ಅನುಷಾನಗೊಳಿಸುವುದಕ್ಕಾಗಿ ಅದಕ್ಕೆ ಅಥವಾ ಅದರ ಜೊತೆಗೆ ಪ್ರಾಸಂಗಿಕವಾಗಿ ಸಮಬಂಧಪಟ್ಟ ಇತರ ಯಾವುದೇ ವಿಷಯವನ್ನು ನೋಡಿಕೊಳ್ಳುವುದು.

**28.** ಪ್ರತಿಯೊಂದು ರಾಜ್ಯ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಸರ್ಕಾರ ಮತ್ತು ಕೇಂದ್ರ ಒಕ್ಕೂಟದ ಆಡಳಿತವು, ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂತೆ ಈ ಅಧಿನಿಯಮದ ಅನುಷ್ಟಾನದ ಪ್ರಗತಿಯ ಬಗ್ಗೆ ಅಂತಹ ನಿಯತಕಾಲಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ರಾಜ್ಯಗಳು ಅಥವಾ ಒಕ್ಕೂಟದ ರಾಜ್ಯ ಕ್ಷೇತ್ರಗಳು ನಿಯತಕಾಲಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವುದು

**29. ಕೇಂದ್ರ ಮೇಲ್ವಿಚಾರಣಾ ಸಮಿತಿ.**

**ಕೇಂದ್ರ ಮೇಲ್ವಿಚಾರಣಾ ಸಮಿತಿ.**

(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಒಂದು ಕೇಂದ್ರ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಕೇಂದ್ರ ಮೇಲ್ವಿಚಾರಣಾ ಸಮಿತಿಯು, ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಎಂದರೆ :

(ಎ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕೇಂದ್ರ ಮಂತ್ರಿ – ಅಧ್ಯಕ್ಷರು ಪದನಿಮಿತ್ತ

(ಬಿ) ಅನುಸೂಚಿತ ಜಾತಿಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷರು–ಇಾಸದಸ್ಯರು, ಪದನಿಮಿತ್ತ.

(ಸಿ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ರಾಜ್ಯ ಸಚಿವರು – ಸದಸ್ಯರು ಪದನಿಮಿತ್ತ.

(ಡಿ) ಅಧ್ಯಕ್ಷರು, ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗ –ಸದಸ್ಯರು ಪದನಿಮಿತ್ತ

(ಇ) ಅನುಸೂಚಿತ ಜಾತಿಗಳ ಅಭಿವೃದ್ದಿಯ ಬಗ್ಗೆ ವ್ಯವಹರಿಸುವ ಯೋಜನಾ ಆಯೋಗದಸದಸ್ಯರು– ಸದಸ್ಯರು, ಪದನಿಮಿತ್ತ.

(ಎಫ್) ಅನುಸೂಚಿತ ಜಾತಿಗಳಿಗೆ ಸೇರಿದ ಸಂಸತ್‌ನ ಮೂರು ಮಂದಿ ಚುನಾಯಿತಗೊಂಡ ಸದಸ್ಯರು; (ಅವರಲ್ಲಿ ಲೋಕಸಭೆಯಿಂದ ಇಬ್ಬರು ಮತ್ತು ರಾಜ್ಯ ಸಭೆಯಿಂದ ಒಬ್ಬರು.

(ಜಿ) ಈ ಕೆಳಕಂಡ ಮಂತ್ರಾಲಯಗಳ ಕಾರ್ಯದರ್ಶಿಗಳು:

(i) ಸಾಮಾಜಿಕ ನ್ಯಾಯ ಸಬಲೀಕರಣ ನ್ಯಾಯ ಮತ್ತು ಸಬಲೀಕರಣ ಇಲಾಖೆ;
(ii) ನಗರಾಭಿವೃದ್ಧಿ;
(iii) ವಸತಿ ಮತ್ತು ನಗರ ಬಡತನ ನಿರ್ಮೂಲನೆ;
(iv) ಕುಡಿಯುವ ನೀರು ಮತ್ತು ನೈರ್ಮಲ್ಯ
(v) ಪಂಚಾಯತ್ ರಾಜ್
(vi) ಹಣಕಾಸು, ಹಣಕಾಸು ಸೇವೆಗಳ ಇಲಾಖೆ ಮತ್ತು
(vii) ರಕ್ಷಣೆ – ಸದಸ್ಯರು ಪದನಿಮಿತ್ತ

(ಹೆಚ್) ಅಧ್ಯಕ್ಷರು, ರೈಲ್ವೆ ಮಂಡಳಿ– ಸದಸ್ಯರು ಪದನಿಮಿತ್ತ

(ಐ) ಮಹಾನಿರ್ದೇಶಕರು, ರಕ್ಷಣಾ ಅಸ್ತಿಪಾಸ್ತಿಗಳು– ಸದಸ್ಯರು ಪದನಿಮಿತ್ತ

(ಜೆ) ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂತೆ, ರಾಜ್ಯ ಸರ್ಕಾರಗಳಿಂದ ಆರು ಮಂದಿಗಿಂತ ಕಡಿಮೆಯಲ್ಲದ ಪ್ರತಿನಿಧಿಗಳು ಮತ್ತು ಒಕ್ಕೂಟದ ರಾಜ್ಯ ಕ್ಷೇತ್ರದಿಂದ ಒಬ್ಬ ಪ್ರತಿನಿಧಿ.

(ಕೆ) ದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮ್ಯಾನ್ಯುಯಲ್ ಸ್ಕ್ಯಾಂವೆಜರ್ ಪ್ರತಿನಿಧಿಸುವ ದೇಶದ ನಿವಾಸಿಗಳಾಗಿರುವ ಅಧ್ಯಕ್ಷರಿಂದ ನಾಮ ನಿರ್ದೇಶಿತರಾದ ಆರು ಮಂದಿಗಿಂತ ಕಡಿಮೆಯಲ್ಲದ ಸಾಮಾಜಿಕ ಕಾರ್ಯಕರ್ತರು (ಅವರಲ್ಲಿ ಇಬ್ಬರು ಮಹಿಳೆಯರು ಆಗಿರತಕ್ಕದ್ದು.)

(ಎಲ್) ಅನುಸೂಚಿತ ಜಾತಿಗಳ ಅಭಿವೃದ್ಧಿ ನಂತರ ಅವರನ್ನು ನೋಡಿಕೊಳ್ಳುವ ಸಲುವಾಗಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಅಡಿಯಲ್ಲಿ ಬರುವ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಜಂಟಿ ಕಾರ್ಯದರ್ಶಿ – ಸದಸ್ಯ ಕಾರ್ಯದರ್ಶಿ – ಪದನಿಮಿತ್ತ

(ಎಂ) ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು ಅಭಿಪ್ರಾಯದಲ್ಲಿ ಕೇಂದ್ರ ಮಂತ್ರಾಲಯದ ಅಥವಾ ಇಲಾಖೆಗಳ ಮತ್ತು ಏಜೆನ್ಸಿಗಳ ಅಂತಹ ಇತರೆ ಪ್ರತಿನಿಧಿಗಳು

(3) ಕೇಂದ್ರ ಮೇಲ್ವಿಚಾರಣಾ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಟ ಪಕ್ಷ ಒಂದು ಬಾರಿಯಾದರೂ ಸಭೆಯನ್ನು ಸೇರತಕ್ಕದ್ದು.

ಕೇಂದ್ರ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು:

**30. ಕೇಂದ್ರ ಮೇಲ್ವಿಚಾರಣಾ ಸಮಿತಿಯ ಕಾರ್ಯಗಳು :–**

(ಎ) ಈ ಅಧಿನಿಯಮವನ್ನು ಮತ್ತು ಸಂಬಂಧಿಸಿದ ಕಾನೂನುಗಳು ಹಾಗೂ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳು ಕೈಗೊಳ್ಳುವ ಕಾರ್ಯಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು ಮತ್ತು ಸಲಹೆಗಳನ್ನು ನೀಡುವುದು.

(ಬಿ) ಸಂಬಂದಪಟ್ಟ ಎಲ್ಲಾ ಏಜೆನ್ಸಿಗಳ ಪ್ರಕಾರ್ಯವನ್ನು ಸಮನ್ವಯಗೊಳಿಸುವುದು.

(ಸಿ) ಈ ಅಧಿನಿಯಮವನ್ನು ಅನುಷ್ಠಾನಗೊಳಿಸಲು ಪ್ರಾಸಂಗಿಕವಾಗಿ ಅಥವಾ ಸಂಬಂಧಪಟ್ಟ ಇತರೆ ಯಾವುದೇ ವಿಷಯವನ್ನು ನೋಡಿಕೊಳ್ಳುವುದು

**ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಪ್ರಕಾರ್ಯಗಳು.**

**ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಪ್ರಕಾರ್ಯಗಳು.**

**31. (1)** ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗವು ಈ ಕೆಳಕಂಡ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು,

(ಎ) ಈ ಅಧಿನಿಯಮದ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘನೆ ಮಾಡಿರುವುದಕ್ಕೆ ಸಂಬಂದಪಟ್ಟ ದೂರುಗಳನ್ನು ವಿಚಾರಣೆ ಮಾಡುವುದು ಮತ್ತು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಶಿಫಾರಸ್ಸುಗಳೊಂದಿಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅದರ ನಿರ್ಣಯಗಳನ್ನು ತಿಳಿಸುವುದು ಮತ್ತು

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆಗಳನ್ನು ನೀಡುವುದು

(ಡಿ) ಈ ಅಧಿನಿಯಮದ ಅನುಷ್ಠಾನವಾಗದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅದು ಸ್ವಯಂಪ್ರೇರಣೆಯಿಂದ ತಾನಾಗಿಯೇ ನೋಟೀಸ್ ಅನ್ನು ನೀಡುವುದು.

(2) ರಾಷ್ಟ್ರೀಯ ಆಯೋಗವು (1)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಂಬಂಧದಲ್ಲಿ ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಯಾವುದೇ ಸರ್ಕಾರ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದಿಂದ ತರಿಸಿಕೊಳ್ಳುವುದಕ್ಕೆ ಅದು ಅಧಿಕಾರವನ್ನು ಹೊಂದಿರತಕ್ಕದ್ದು.

**ಈ ಅಧಿನಿಯಮದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡಲು ಯುಕ್ತ ಪ್ರಾಧಿಕಾರವನ್ನು ನೇಮಕ ಮಾಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ.**

**32. (1)** ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ 31ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯವನ್ನು ಯಥೋಚಿತ ವ್ಯತ್ಯಾಸ ಗಳೊಂದಿಗೆ ನಿರ್ವಹಿಸಲು ಅದು ಸೂಕ್ತವೆಂದು ಭಾವಿಸಿದಂತೆ ರಾಜ್ಯದಲ್ಲಿ ಒಂದು ಸಫಾಯಿ ಕರ್ಮಚಾರಿಗಳ ರಾಜ್ಯ ಆಯೋಗವನ್ನು ಅಥವಾ ಒಂದು ಅನುಸೂಚಿತ ಜಾತಿಗಳ ರಾಜ್ಯ ಆಯೋಗವನ್ನು ಅಥವಾ ಅಂಥ ಇತರ ಶಾಸನಬದ್ದ ಅಥವಾ ಇತರ ಪ್ರಾಧಿಕಾರವನ್ನು ನೇಮಕಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಿದ ಒಂದು ಪ್ರಾಧಿಕಾರವು 31ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅದು ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಅಧಿಕಾರಗಳನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಹೊಂದಿರತಕ್ಕದ್ದು.

## ಅಧ್ಯಾಯ – VIII

## ಸಂಕೀರ್ಣ

**33. ಒಳಚರಂಡಿಗಳು ಮೊದಲಾವುಗಳನ್ನು ಸ್ವಚ್ಛಗೊಳಿಸಲು ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುವುದಕ್ಕೆ ಸ್ಥಳೀಯ ಪ್ರಾಧಿಕಾರಿಗಳು ಮತ್ತು ಇತರ ಏಜೆನ್ಸಿಗಳ ಕರ್ತವ್ಯ.**(1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ ಮತ್ತು ಇತರೆ ಏಜೆನ್ಸಿಯು ತನ್ನ ನಿಯಂತ್ರಣ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆಗಳನ್ನು, ರೊಚ್ಚುತೊಟ್ಟಿಗಳನ್ನು ಮತ್ತು ಇತರ ಸ್ಥಳಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಮತ್ತು ಜಾಡುಮಾಲಿಗಳು ಸ್ವಚ್ಛಗೊಳಿಸುವ ವಿಧಾನದಲ್ಲಿ ಮಲಮೂತ್ರಗಳನ್ನು ಕೈಗಳಿಂದ ಬಾಚುವಂತಹ ಕೆಲಸಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು ಅಗತ್ಯವಿರುವ ದೃಷ್ಟಿಯಿಂದ ಯುಕ್ತ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳನ್ನು ಬಳಕೆ ಮಾಡುವುದು ಅವುಗಳ ಕರ್ತವ್ಯವಾಗಿರತಕ್ಕದ್ದು.

**ಒಳಚರಂಡಿಗಳು ಮೊದಲಾವುಗಳನ್ನು ಸ್ವಚ್ಛಗೊಳಿಸಲು ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುವುದಕ್ಕೆ ಸ್ಥಳೀಯ ಪ್ರಾಧಿಕಾರಿಗಳು ಮತ್ತು ಇತರ ಏಜೆನ್ಸಿಗಳ ಕರ್ತವ್ಯ.**

(2) (1)ನೇ ಉಪಪ್ರಕರಣದಲ್ಲಿ ನಮೂದಿಸಲಾದಂತೆ ಸದರಿ ಮೇಲ್ಕಂಡ ಕೆಲಸವನ್ನು ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಹಣಕಾಸಿನ ನೆರವು, ಪ್ರೋತ್ಸಾಹಧನ ಮತ್ತು ಇತರ ರೀತಿಯ ನೆರವು ನೀಡುವ ಮುಖಾಂತರ ಉತ್ತೇಜಿಸುವುದು ಸಮುಚಿತ ಸರ್ಕಾರದ ಕರ್ತವ್ಯವಾಗಿರತಕ್ಕದ್ದು.

**34.** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳುವ ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಸಮುಚಿತ ಸರ್ಕಾರ ಅಥವಾ ಸರ್ಕಾರ ಸಮುಚಿತ ಸರ್ಕಾರದ ಯಾರೇ ಅಧಿಕಾರಿಯು ಅಥವಾ ಸಮಿತಿಯ ಯಾರೇ ಸದಸ್ಯನ ವಿರುದ್ಧ ಯಾವುದೇ ದಾವೆ, ಕಾನೂನುಕ್ರಮ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

**35.** ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮಕ್ಕೆ ಅನ್ವಯಿಸುವ ಯಾವುದೇ ಉಪಬಂಧದ ಯಾವುದೇ ವಿಷಯಕ್ಕೆ ಸಂಬಂದಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಆ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ನಿರ್ಬಂಧಕ ಆಜ್ಞೆಯನ್ನು ನೀಡತಕ್ಕದ್ದಲ್ಲ.

ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ

**36.** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳು ಮೀರದ ಅವಧಿಯೊಳಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸತಕ್ಕದ್ದು.

ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.

(2) ವಿಶೇಷವಾಗಿ ಮತ್ತು ಈ ಹಿಂದೆ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಭಾದಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ, ಎಂದರೆ:–

(ಎ) 2ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಉದ್ಯೋಗದಾತನ ಬಾಧ್ಯತೆಯ ಬಗ್ಗೆ ;

(ಬಿ) 2ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಮತ್ತು (ಜಿ) ಖಂಡಗಳ ಮೇರೆಗೆ ಮಲಮೂತ್ರಗಳು ಸಂಪೂರ್ಣವಾಗಿ ಕೊಳೆತು ಹೋಗುವ ರೀತಿಯ ಬಗ್ಗೆ;

(ಸಿ) 4ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೈರ್ಮಲ್ಯರಹಿತ ಶೌಚಾಲಯವನ್ನು ಸಮೀಕ್ಷೆ ಮಾಡುವ ಮತ್ತು ಅದರ ಪಟ್ಟಿಯನ್ನು ಪ್ರಕಟಿಸುವ ರೀತಿಯ ಬಗ್ಗೆ:

(ಡಿ) 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೈರ್ಮಲ್ಯರಹಿತ ಶೌಚಾಲಯಗಳನ್ನು ನೆಲಸಮಗೊಳಿಸುವುದಕ್ಕೆ ನೀಡುವ ನೋಟೀಸಿನ ಕಾರ್ಯವಿಧಾನದ ಮತ್ತು ಅದನ್ನು ನೆಲಸಮಗೊಳಿಸಿದ ವೆಚ್ಚವನ್ನು ವಸೂಲಿ

ಮಾಡುವ ಬಗ್ಗೆ;

(ಇ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಮೀಕ್ಷೆಯ ವಿಷಯ ಮತ್ತು ಅದರ ವಿಧಿವಿಧಾನದ ಬಗ್ಗೆ;

(ಎಫ್) 11ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಮಲಹೊರುವ ಜಾಡಮಾಲಿಗಳನ್ನು ಗುರುತಿಸುವುದಕ್ಕೆ ಅರ್ಹತಾ ಷರತ್ತುಗಳ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕೆಲಸ ಮಾಡುತ್ತಿರುವುದಾಗಿ ಕಂಡುಬಂದ ವ್ಯಕ್ತಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ;

(ಜಿ) 11 ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಕಂಡು ಬಂದ ವ್ಯಕ್ತಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ;

(ಹೆಚ್) 12ನೇ ಪ್ರಕರಣದ (1) ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕಾರ್ಯನಿರ್ವಹಣಾಧಿಕಾರಿಗೆ ಅಥವಾ ಈ ಸಂಬಂಧವಾಗಿ ಆತನಿಂದ ಅಧಿಕೃತವಾದ ಮುಖ್ಯ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸುವ ವಿಧಾನದ ಬಗ್ಗೆ;

(ಐ) 13ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡ (ಈಈ)ನೇ ಉಪಖಂಡದ ಮೇರೆಗೆ ಪ್ರಾರಂಭಿಕವಾಗಿ ಒಂದುಬಾರಿ ನಗದು ನೆರವನ್ನು ಕಲ್ಪಿಸುವ ಬಗ್ಗೆ;

(ಜೆ) 20ನೇ ಪ್ರಕರಣದ (2) ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಆ ಬಗ್ಗೆ ತಪಾಸಣೆ ಮಾಡುವ ತಪಾಸಣಾಧೀಕಾರಿಗಳಿಗೆ ಅಂತಹ ಇತರ ಅಧಿಕಾರಿಗಳ ಬಗ್ಗೆ ಮತ್ತು

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸುವುದು ಅಗತ್ಯವೆಂದು ಕಂಡುಬರಬಹುದಾದ ಯಾವುದೇ ಇತರ ವಿಷಯದ ಬಗ್ಗೆ ಉಪಬಂದವನ್ನು ಕಲ್ಪಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಕೇಂದ್ರಸರ್ಕಾರವು ಅದನ್ನು ರಚಿಸಿದ ತರುವಾಯ ಅದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂತಹ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಕೊಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದಲ್ಲ. ಅದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ರಾಜ್ಯಸರ್ಕಾರವು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

ಮಾದರಿ ನಿಯಮಗಳನ್ನು ರಚಿಸಲು ಕೇಂದ್ರಸರ್ಕಾರದ

**37.** (1) ಈ ಅಧಿನಿಯಮದ 36ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ

(ಎ) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರಗಳ ಮಾರ್ಗದರ್ಶನಕ್ಕೆ ಮತ್ತು ಅವುಗಳ ಬಳಕೆಗಾಗಿ ಮಾದರಿ ನಿಯಮಗಳನ್ನು

ಅಧಿಕಾರ.

ಪ್ರಕಟಿಸತಕದ್ದು ಮತ್ತು

(ಬಿ) ರಾಜ್ಯ ಸರ್ಕಾರವು, ಈ ಅಧಿನಿಯಮದ 36ನೇ ಪ್ರಕರಣದ ಮೇರೆಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಮೂರು ತಿಂಗಳ ಅವಧಿಯೊಳಗಾಗಿ ನಿಯಮಗಳನ್ನು ರಚಿಸಿ ಅಧಿಸೂಚಿಸುವುದಕ್ಕೆ ವಿಫಲವಾದ ಸಂದರ್ಭದಲ್ಲಿ ಆಗ ಕೇಂದ್ರ ಸರ್ಕಾರವು ಅಧಿಸೂಚಿಸಿದ ಮಾದರಿ ನಿಯಮಗಳು, ರಾಜ್ಯಸರ್ಕಾರವು ತನ್ನ ನಿಯಮಗಳನ್ನು ಅಧಿಸೂಚಿಸುವಂಥ ಕಾಲದವರೆಗೂ ಅಂಥ ರಾಜ್ಯದಲ್ಲಿ ಸದರಿ ನಿಯಮಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಜಾರಿಯಲ್ಲಿರುವುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಮಾದರಿ ನಿಯಮಗಳನ್ನು ಕೇಂದ್ರ ಸರ್ಕಾರವು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅದಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೆಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡತವಾಗಬಹುದಾಂಥಹ ಒಟ್ಟು ಮುವತ್ತು ದಿನಗಳ ಅವಧಿಯವರೆಗೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕಿಂತ ಮುಂದೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅದು ಆ ತರವಾಯು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು, ಅದಾಗ್ಯೂ ಅಂಥ ಮಾರ್ಪಾಟು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

ತೊಂದರೆಗಳನ್ನು ನಿವಾರಿಸಲು ಅಧಿಕಾರ.

**38.** (1) ಈ ಅಧಿನಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

ಪರಂತು, ಆ ರಾಜ್ಯದಲ್ಲಿ ಈ ಅಧಿನಯಮದ ಪ್ರಾರಂಭದಿಂದ ಮೂರು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಅದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ವಿನಾಯಿತಿ ನೀಡಲು ಅಧಿಕಾರ.

**39. (1)** ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂತಹ ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಯಾವುದೇ ಪ್ರದೇಶಕ್ಕೆ ಅಥವಾ ಕಟ್ಟಡಗಳ ಪ್ರವರ್ಗಕ್ಕೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಈ ಅಧಿನಿಮಯದ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ ಮಾಡಿದ ಯಾವುದೇ ಆದೇಶದಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯಲ್ಲಿ, ಉಪ–ವಿಧಿಗಳಲ್ಲಿ ಅಥವಾ ಅದರ ಮೇರೆಗೆ ರೂಪಿಸಿದ ಯೋಜನೆಯಲ್ಲಿ ಒಳಗೊಂಡಿರುವ ಯಾವುದೇ ನಿರ್ದಿಷ್ಟ ಅಗತ್ಯತೆಯನ್ನು ಪಾಲಿಸುವುದರಿಂದ ವಿನಾಯಿತಿ ನೀಡಬಹುದು ಅಥವಾ ಪ್ರಕರಣಗಳ ವರ್ಗ ಅಥವಾ ವರ್ಗಗಳಲ್ಲಿ ಅಂತಹ ಯಾವುದೇ ಅಗತ್ಯತೆಯನ್ನು ಪಾಲಿಸುವುದನ್ನು ಆ ಕಾಲದಲ್ಲಿ ಆರು ತಿಂಗಳುಗಳು ಮೀರಿದ ಅವಧಿಯವರೆಗೆ ಬಿಟ್ಟು ಬಿಡಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಅದನ್ನು ರಚಿಸಿದ ತರುವಾಯ ಅದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ರಾಜ್ಯ ವಿಧಾನ ಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

---

ಪಿ.ಕೆ ಮಲ್ಹೋತಾ
(ಭಾರತ ಸರ್ಕಾರದ
ಕಾರ್ಯದರ್ಶಿ)